# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 189 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 29.01.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 189 • PRGI No:KARKAN/2023/88055 • VIJAYANAGARA • 29.01.2025 • Wednesday • Page:04 • Rs:2





Advertise
With HAMPI TIMES
1,10,000+
Digital E-PAPER READERS
No.1 HAMPI TIMES LEADING VIJAYANAGARA District News Paper
Contact for Advertisements: 9448633038

HAMPI TIMES VIJAYANAGARA

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com


ನಿಮ್ಮ ಕೈಗೆಟಕುವ ದರದಲ್ಲಿ
ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಹಂಪಿ ಟೈಮ್ಸ್‌ನಲ್ಲಿ ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ ಸಂಪರ್ಕಿಸಿ
M:9448633038


## ಆನಂದ ಬಾಣ




## ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2024–25ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಪ್ರತಿಬಿಂಬಿಸಲು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅವರ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಇಲಾಖೆಯವತಿಯಿಂದ ಪ್ರತಿ ವರ್ಷ 'ಕಿತ್ತೂರು ರಾಣಿ ಚೆನ್ನಮ್ಮ' ಇವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. ಅದರಂತೆ 2024–25ನೇ ಸಾಲಿಗೆ ಈ ಪ್ರಶಸ್ತಿಗಾಗಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಅರ್ಹ ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳನ್ನೊಳಗೊಂಡಂತೆ ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ ಜೀವನೋಪಾಯದಿಂದ ಪಾರು ಮಾಡಿದಂತಹ ಮಹಿಳೆಯರಿಗೆ ವೀರಮಹಿಳೆ ಎಂದು ಗುರುತಿಸಿ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಲು, ಅರ್ಹ ಮಹಿಳೆಯರ ಹಾಗೂ ಸಂಸ್ಥೆಗಳ ಮಾಹಿತಿಗಳನ್ನು ಭರ್ತಿ ಮಾಡಿ ಅರ್ಜಿಯನ್ನು ಫೆಬ್ರವರಿ 4 ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾಡಳಿತ ಭವನ ಕೊಪ್ಪಳ ಇಲ್ಲಿಗೆ ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

### ಹಂಪಿ ಉತ್ಸವಕ್ಕೆ ಸಲಹೆ ಸಭೆ | ಸ್ಥಳೀಯರಿಗೆ ಆದ್ಯತೆ | ಡಿಸಿ ಎಂ.ಎಸ್.ದಿವಾಕರ ಹೇಳಿಕೆ

# ಪ್ರೇಕ್ಷಕರ ಮೆಚ್ಚುಗೆಗೆ ತಕ್ಕಂತೆ ಕಾರ್ಯಕ್ರಮಗಳ ಆಯೋಜನೆ

### ವಸಂತ ವೈಭವದಲ್ಲಿ ಜಿಲ್ಲೆಯ ಸ್ಮಾರಕಗಳ ಸ್ತಬ್ಧಚಿತ್ರ – ವೇದಿಕೆಗೆ ಎಂ.ಪಿ.ಪ್ರಕಾಶ ಹೆಸರಿಡಿ ಎಂದ ಮುಖಂಡರು



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವವು ಕೇವಲ ರಾಜಕಾರಣಿಗಳ ವೇದಿಕೆಯಾಗದೇ, ವಿಜಯನಗರ ಸಾಮ್ರಾಜ್ಯದ ಅರಸ ಪ್ರೌಢದೇವರಾಯನ ಕಾಲದಲ್ಲಿ ರಾಜಾಡಳಿತಕ್ಕೆ ಆಶೀರ್ವದಿಸುತ್ತಾ ಬಂದಿದ್ದ ಹಂಪಿಯಲ್ಲಿರುವ ಹಂಪಿ ಹೇಮಕೂಟ ಮಠದ ಜಗದ್ಗುರುಗಳು, ಮಾತಂಗ ಶ್ರೀಗಳನ್ನು ಹಾಗೂ ಆನೆಗೊಂದಿ ರಾಜವಂಶಸ್ಥರನ್ನು ಮುಖ್ಯ ವೇದಿಕೆಗೆ ಮೊದಲ ದಿನವೇ ಆಹ್ವಾನಿಸಿ, ಗುರುಪರಂಪರೆಯನ್ನು ಗೌರವಿಸಿದಾಗ ಉತ್ಸವಕ್ಕೆ ಮತ್ತಷ್ಟು ಮೆರಗು ಹೆಚ್ಚುವುದರೊಂದಿಗೆ ಅಪಾರ ಸಂಖ್ಯೆಯ ಭಕ್ತರು ಸಮಾವೇಶಗೊಳ್ಳುವರು ಎಂದು ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಸಾಲಿಸಿದ್ದಯ್ಯಸ್ವಾಮಿ, ನಿವೃತ್ತ ಉಪನ್ಯಾಸಕ ಉಮಾಮಹೇಶ್ವರ, ಮುಖಂಡ ವಿ.ಪರಶುರಾಮ ಸಲಹೆ ಸಭೆಯಲ್ಲಿ ಅಭಿಪ್ರಾಯವ್ಯಕ್ತಪಡಿಸಿದರು.




ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಜರುಗಿದ ವಿವಿಧ ಸಂಘ, ಸಂಸ್ಥೆಗಳ ಹಂಪಿ ಉತ್ಸವಕ್ಕೆ ಸಲಹಾ ಸಭೆಯಲ್ಲಿ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು. ಹಂಪಿ ಉತ್ಸವ ಕಳೆದ ಬಾರಿ ಸುಮಾರು ಐದು ಲಕ್ಷ ಜನರೊಂದಿಗೆ ಅದ್ದೂರಿಯಾಗಿ ನಡೆದಿದೆ. ಈ ಬಾರಿ ಮುಖ್ಯ ವೇದಿಕೆಗೆ ಹಂಪಿ ಉತ್ಸವ ರೂವಾರಿ ಎಂ.ಪಿ.ಪ್ರಕಾಶ ಅವರ ಹೆಸರಿಡಬೇಕು. ಕಲಾವಿದರ ಆಯ್ಕೆಯಲ್ಲಿ ಕೆಲ ಎಡವಟ್ಟುಗಳು ನಡೆದಿದ್ದು ಕಲಾವಿದರಿಗೆ ಬೇಸರ ಮೂಡಿಸಿದೆ. ಕಳೆದ ಉತ್ಸವದಲ್ಲಿ ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಕವಿಗಳಿಗೆ ಇದುವರೆಗೂ ಸಂಬಂಧಿಸಿದವರಿಂದ ಗೌರವಧನ ಪಾವತಿಯಾಗಿಲ್ಲ. ಸ್ಥಳೀಯರಿಗೆ ಕಳೆದ ಬಾರಿಗಿಂತ ಹೆಚ್ಚಿನ ಅವಕಾಶ ನೀಡಬೇಕು. ಹೆಣ್ಣುಮಕ್ಕಳು, ಮಹಿಳೆಯರಿಗೆ ಹೆಚ್ಚಿನ ಸುರಕ್ಷತೆ ಹಾಗೂ ಪೊಲೀಸ್ ಭದ್ರತೆ ಒದಗಿಸಬೇಕು. ನಿಗದಿತ ಅಂತರದಲ್ಲಿ ಮಹಿಳೆಯರಿಗೆ ಹೆಚ್ಚಿನ ಶೌಚಾಲಯಗಳನ್ನು ನಿರ್ಮಿಸಿ, ನೀರಿನ ವ್ಯವಸ್ಥೆ ಕಲ್ಪಿಸಬೇಕು. ಉತ್ಸವದಲ್ಲಿ ಸೇವೆ ಸಲ್ಲಿಸಲು ಸಂಘಸಂಸ್ಥೆಗಳಿಗೂ ಅವಕಾಶ ನೀಡಬೇಕು. ವಿಐಪಿ ಪಾಸ್ ಸಂಸ್ಕೃತಿಗೆ ಇತಿಶ್ರೀ ಹಾಡಿ ಹಂಪಿ ಅಂಗಳದಲ್ಲಿ ಎಲ್ಲರೂ ಸಮಾನರೆಂಬ ಭಾವನೆ ಮೂಡಿಸಬೇಕು. ಹಂಪಿ ಉತ್ಸವದ ಪ್ರದೇಶದಲ್ಲಿ ರಾಜಕಾರಣಿಗಳ ಬ್ಯಾನರ್ ಉತ್ಸವ ಆಗದಿರಲಿ. ವಿಜಯನಗರ ಗತವೈಭವ ಸಾರುವ ಕಲೆ ಸಂಸ್ಕೃತಿ ವಿಜೃಂಭಿಸಲಿ. ಪ್ರತಿ ಉತ್ಸವದಲ್ಲಿ ಹಂಪಿ ಉತ್ಸವಕ್ಕೆ ನವೆಂಬರ್ ಮೊದಲ ವಾರದಲ್ಲಿ ನಡೆಯುವಂತೆ ದಿನ ನಿಗದಿಮಾಡಿ ಬಜೆಟ್‌ನಲ್ಲಿ ಉತ್ಸವಕ್ಕೆ ವಿಶೇಷ ಅನುದಾನ ಮೀಸಲಿಡಬೇಕು. 24/7 ಸಾರಿಗೆ, ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಹಂಪಿ ಉತ್ಸವದಲ್ಲಿ ವಿಜಯನಗರ, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಕಲಾವಿದರನ್ನು ಸ್ಥಳೀಯ ಕಲಾವಿದರೆಂದು ಪರಿಗಣಿಸಬೇಕು. ಧ್ವನಿ ಮತ್ತು ಬೆಳಕು ಕಾರ್ಯಕ್ರಮದಲ್ಲಿ ಒಂದು ಡ್ಯಾನ್ಸ್ ಸಂಸ್ಥೆಯಿಂದ 15ಕ್ಕೂ ಅಧಿಕ ಮಕ್ಕಳನ್ನು ಆಯ್ಕೆಮಾಡಿಕೊಂಡಿದ್ದರಿಂದ ಸ್ಥಳೀಯ ಮಕ್ಕಳು ವಂಚಿತರಾಗಿದ್ದು ಈಬಾರಿ ಮರುಕಳಿಸದಿರಲಿ. ದೇಶೀಯ ಕಲೆಗಳಿಗೆ ಮೊದಲ ಆದ್ಯತೆ ನೀಡಬೇಕು , ಅನಂತಶಯನಗುಡಿ ಮೇಲ್ಸೇತುವೆ ಕಾಮಗಾರಿಯಿಂದಾಗಿ ಟ್ರಾಫಿಕ್ ಕಿರಿಕಿರಿ ಆಗದಂತೆ ಪರ್ಯಾಯ ಮಾರ್ಗಗಳನ್ನು ಗುರುತಿಸಿ ಎಂದು ರೈತರು, ಕಲಾವಿದರು, ಉದ್ಯಮಿಗಳು, ವಿಶೇಷ ಚೇತನರ ಮುಖಂಡರು ಸೇರಿದಂತೆ ಇತರರು ಸಲಹೆ ನೀಡಿದರು.

> ವಿಶ್ವವಿಖ್ಯಾತ ಹಂಪಿ ಪಾರಂಪರಿಕ ತಾಣದಲ್ಲಿ ನಡೆಯುವ ಉತ್ಸವ ಈಬಾರಿ ಮತ್ತಷ್ಟು ಅದ್ದೂರಿಯಾಗಲಿದೆ. ಜಿಲ್ಲೆಯ ಸಂಘ–ಸಂಸ್ಥೆಗಳು, ಜನತೆಯ ಸಹಕಾರದಿಂದ ಜನಸಾಮಾನ್ಯರ ಉತ್ಸವನ್ನಾಗಿಸಲು ಸಾಧ್ಯ. ನಿಮ್ಮ ಸಲಹೆಗಳನ್ನು ಜಿಲ್ಲಾಡಳಿತ ಸದಾ ಗೌರವಿಸುತ್ತದೆ. ಪ್ರೇಕ್ಷಕರ ದೃಷ್ಟಿಕೋನ ದಲ್ಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.
>
> – ಎಂ.ಎಸ್.ದಿವಾಕರ್ ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಕಳೆದಬಾರಿ ಪಾರ್ಕಿಂಗ್‌ಗೆ ರೈತರು ತಮ್ಮ ಭೂಮಿಯನ್ನು ನೀಡಿ ಸಹಕರಿಸಿದ್ದಾರೆ. ಸಂಘ ಸಂಸ್ಥೆಗಳು ಹಾಗೂ ಜನರ ಸಹಕಾರದಿಂದ ಹಂಪಿ ಉತ್ಸವ ಯಶಸ್ಸಿನ ದಾಖಲೆ ಬರೆದಿದೆ. ಈ ಬಾರಿಯೂ ಎಲ್ಲರ ಸಹಕಾರದೊಂದಿಗೆ ಎಲ್ಲರ ಹೆಮ್ಮೆಯ ಹಂಪಿ ಉತ್ಸವವನ್ನು ಕಳೆದ ಬಾರಿಗಿಂತ ಅಧಿಕ ಜನರನ್ನು ಆಕರ್ಷಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು. ಕಳೆದ ಬಾರಿ ನಮ್ಮ ಗಮನಕ್ಕೆ ಬಾರದೆ ಆಗಿರುವ ಸಣ್ಣಪುಟ್ಟ ದೋಷ ಈ ಬಾರಿ ಆಗದಂತೆ ಗಮನಹರಿಸಲಾಗುವುದು. ಸ್ಥಳೀಯ ಕಲೆಗಳೊಂದಿಗೆ, ರಾಜ್ಯ, ರಾಷ್ಟ್ರ ಹಾಗೂ ಅಂತ ರಾಷ್ಟ್ರೀಯ ಕಲೆಗಳ ಪ್ರದರ್ಶನವಿದ್ದರೆ ಹೊರಗಿನ ಕಲೆಗಳನ್ನು ಸ್ಥಳೀಯರು ಕಣ್ತುಂಬಿಕೊಳ್ಳಲು ಸಹಕಾರಿಯಾಗಲಿದೆ. ವಿಶೇಷ ಚೇತನರಲ್ಲೂ ವಿಶೇಷ ಕಲೆಗಳಿವೆ. ಪ್ರೇಕ್ಷಕರ ನಿರೀಕ್ಷೆಗೆ ತಕ್ಕಂತೆ ಕಲೆಗಳು ಪ್ರದರ್ಶನಗೊಂಡಾಗ ಉತ್ಸವಗಳು ಯಶಸ್ವಿಯಾಗುತ್ತವೆ. ಆ ನಿಟ್ಟಿನಲ್ಲಿ ಸಚಿವರು, ಸಂಸದರು, ಶಾಸಕರೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಅಂತಿಮ ರೂಪರೇಷ ಮಾಡುವುದರೊಳಗೆ ಸೂಕ್ತ ಸಲಹೆಗಳನ್ನು ನೀಡುವುವರಿಗೂ ಜಿಲ್ಲಾಡಳಿತ ಸ್ವಾಗತಿಸುತ್ತದೆ ಎಂದರು. ಸಹಾಯಕ ಆಯುಕ್ತ ವಿವೇಕಾನಂದ ತಹಶೀಲ್ದಾರ್ ಎಂ.ಎಂ.ಶೃತಿ ಇತರರು ಇದ್ದರು.

# ಬ್ಯಾಂಕ್ ಖಾತೆಯಿಂದ ಅನಧಿಕೃತ ಹಣ ಕಡಿತ

### ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ತೀರ್ಪು ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಬ್ಯಾಂಕ್ ಖಾತೆಯಿಂದ ಅನಧಿಕೃತವಾಗಿ ಹಣ ಕಡಿತಗೊಂಡಿರುವ ಪ್ರಕರಣದಡಿ ದೂರುದಾರರಿಗೆ ಪರಿಹಾರ ನೀಡುವಂತೆ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ತೀರ್ಪು ಪ್ರಕಟಿಸಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 56/2024 ರಲ್ಲಿನ ಅಂತಿಮ ತೀರ್ಪಿನ ಸಾರಾಂಶದನ್ವಯ ಫಿರ್ಯಾದುದಾರರಾದ ವೀರಣ್ಣ ತಂದೆ ನಾಗಪ್ಪ ಮಟ್ಟಿ, ಉದ್ಯೋಗ: ಶಿಕ್ಷಕರು, ಅಳವಂಡಿ ಗ್ರಾಮ ತಾಲ್ಲೂಕ ಮತ್ತು ಜಿಲ್ಲೆ ಕೊಪ್ಪಳ, ಇವರು ಎದುರುದಾರರಾದ ಕೆನರಾ ಬ್ಯಾಂಕ್ ಬೆಟಗೇರಿ ಬ್ರಾಂಚ್ ಕೊಪ್ಪಳ ಜಿಲ್ಲೆ, ಇವರಲ್ಲಿ ಎಸ್.ಬಿ ಖಾತೆ ಹೊಂದಿದ್ದು ಎದುರುದಾರರ ಬ್ಯಾಂಕಿನ ಗ್ರಾಹಕರಾಗಿರುತ್ತಾರೆ. ತಮ್ಮ ಖಾತೆಯಿಂದ ರೂ. 50,000 ರಂತೆ ಎರಡು ಬಾರಿ ಒಟ್ಟು ರೂ. 1,00,000 ಗಳನ್ನು ಯಾವುದೇ ತರಹದ ಮಾಹಿತಿ ಇಲ್ಲದೆ ತನ್ನ ಖಾತೆಯಿಂದ ಅನಧಿಕೃತವಾಗಿ ಕಡಿತಗೊಂಡಿದ್ದು, ದೂರುದಾರರ ಮೊಬೈಲಗೆ ಹಣ ಕಡಿತಗೊಂಡ ಬಗ್ಗೆ ಸಂದೇಶ ಬಂದಿರುತ್ತದೆ. ಮೊಬೈಲನಲ್ಲಿ ಸಂದೇಶ ನೋಡಿದ ತಕ್ಷಣವೇ ದೂರುದಾರರು ಎದುರುದಾರರ ಬ್ಯಾಂಕಿಗೆ ಹೋಗಿ ತನ್ನ ಎಸ್.ಬಿ. ಖಾತೆಯಿಂದ ಅನಧಿಕೃತವಾಗಿ ಹಣ ಕಡಿತಗೊಂಡಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಹಾಗೂ ತಕ್ಷಣವೇ ತನ್ನ ಖಾತೆಯಲ್ಲಿ ಬಾಕಿ ಹಣ ಅನಧಿಕೃತವಾಗಿ ಕಡಿತವಾಗುವುದನ್ನು ತಡೆಹಿಡಿಯುವಂತೆ ಮತ್ತು ತನ್ನ ಖಾತೆಯಿಂದ ಅನಧಿಕೃತವಾಗಿ ಕಡಿತಗೊಂಡ ಮೊತ್ತ ರೂ. 1,00,000 ಗಳನ್ನು ತನಗೆ ಹಿಂತಿರುಗಿಸುವಂತೆ ಲಿಖಿತ ರೂಪದಲ್ಲಿ ಕೋರಿರುತ್ತಾರೆ. ಇದರ ಜೊತೆಗೆ ಅಳವಂಡಿ ಪೋಲಿಸ್ ಠಾಣೆಗೆ ದೂರನ್ನು ಸಹ ಸಲ್ಲಿಸಿರುತ್ತಾರೆ. ಎದುರುದಾರರ ಬ್ಯಾಂಕಿನವರ ಸೂಚನೆಯಂತೆ ಸೈಬರ್ ಪೋಲಿಸ್ ರವರಿಗೂ ಸಹ ದೂರನ್ನು ನೀಡಿರುತ್ತಾರೆ. ಎದುರುದಾರರ ಬ್ಯಾಂಕಿನವರು ದೂರುದಾರರ ಮನವಿಗೆ ಸ್ಪಂದಿಸದೇ ಅವರ ಖಾತೆಯಿಂದ ಅನಧಿಕೃತವಾಗಿ ಕಡಿತಗೊಂಡಿರುವ ಹಣ ರೂ. 1,00,000 ಗಳನ್ನು ಮರಳಿಸದೇ ಇದ್ದುದರಿಂದ ಮಾನಸಿಕವಾಗಿ ನೊಂದು ಗ್ರಾಹಕರ ಆಯೋಗಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ದೂರನ್ನು ದಾಖಲಿಸಿಕೊಂಡ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು ಎನ್ ಮೇತ್ರಿ ಅವರು ಉಭಯ ಪಕ್ಷಗಾರರ ವಾದ ಪ್ರತಿವಾದಗಳನ್ನು ಆಲಿಸಿ, ಎದುರುದಾರರಿಂದ ಉಂಟಾದ ಸೇವಾ ನ್ಯೂನತೆಗಾಗಿ ಎದುರುದಾರ ಕೆನರಾ ಬ್ಯಾಂಕ್, ಅಳವಂಡಿ ಶಾಖೆ ಇವರಿಗೆ ಆರ್.ಬಿ.ಐ ಮಾರ್ಗಸೂಚಿಗಳನ್ವಯ ದೂರುದಾರರ ಹೊಣೆಗಾರಿಕೆ ಶೂನ್ಯ ಇದ್ದು, ಎದುರುದಾರರ ಹೊಣೆಗಾರಿಕೆ ಹೆಚ್ಚಾಗಿದ್ದು ಎದುರುದಾರರು ತನ್ನ ಗ್ರಾಹಕರ ಖಾತೆಯಲ್ಲಿರುವ ಹಣವನ್ನು ಭದ್ರತೆಯಿಂದ ಕಾಪಾಡುವ ಹೊಣೆಗಾರಿಕೆ ಎದುರುದಾರರ ಬ್ಯಾಂಕಿನವರದ್ದಾಗಿದ್ದು, ಅದನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದು ಸೇವಾ ನ್ಯೂನತೆ ಎಸಗಿದ್ದರಿಂದ ದೂರುದಾರರ ಖಾತೆಯಿಂದ ಅನಧಿಕೃತವಾಗಿ ಕಡಿತಗೊಂಡ ಮೊತ್ತ ರೂ. 1,00,000 ಗಳನ್ನು ಪರಿಹಾರವಾಗಿ ನೀಡುವಂತೆ ಆದೇಶಿಸಿರುತ್ತಾರೆ ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ ರೂ. 10,000 ಗಳನ್ನು ಹಾಗೂ ದೂರಿನ ಖರ್ಚು ರೂ. 5,000 ಗಳನ್ನು ಈ ಆದೇಶದ ದಿನಾಂಕದಿಂದ 45 ದಿನಗಳ ಒಳಗಾಗಿ ಎದುರುದಾರರು ದೂರುದಾರರಿಗೆ ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೆ.ಪೂ.ಬಾಲಕರ ನಿಲಯದ ಪಕ್ಕದಲ್ಲೆ ಸೋಲಾರ ಅಳವಡಿಸಬೇಡಿ : ಸಿಐಟಿಯು

**ಹಂಪಿ ಟೈಮ್ಸ್ ಕೂಡ್ಲಿಗಿ**

ಸಿಐಟಿಯು ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ತಾಲೂಕು ಸಮಿತಿಯಿಂದ ವಿದ್ಯಾರ್ಥಿ ವಸತಿ ನಿಲಯಗಳ ಪಕ್ಕದಲ್ಲಿ ಸೋಲಾರ್ ಅಳವಡಿಸಬಾರದು ಒತ್ತಾಯಿಸಿ ಶಾಸಕ ಡಾ.ಎನ್.ಟಿ. ಶ್ರೀನಿವಾಸ್, ತಹಶೀಲ್ದಾರ್ ಎಂ. ರೇಣುಕಾ ಇವರಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.




ತಾಲೂಕಿನ ಎಂ.ಬಿ. ಅಯ್ಯನಹಳ್ಳಿ ಗ್ರಾಮ ನೇತಾಜಿ ಸುಭಾಷ್‌ಚಂದ್ರ ಸರ್ಕಾರಿ ಪ್ರೌಢಶಾಲೆ ಮತ್ತು ಸರ್ಕಾರಿ ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ನಿಲಯದ ಪಕ್ಕದಲ್ಲಿ ಸೋಲಾರ್ ಅಳವಡಿಸಲು ಅಧಿಕಾರಿಗಳು ಆದೇಶ ನೀಡಿರುವುದು ಖಂಡನೀಯ ಹಾಗೂ ಇದು ಕಾನೂನು ಬಾಹಿರ ಕ್ರಮವಾಗಿದೆ. ಶಾಲಾ ಮಕ್ಕಳ ಹಿತದೃಷ್ಠಿಯಿಂದ ಸೋಲಾರ್ ಅಳವಡಿಸು ವುದರಿಂದ ಶಬ್ಧ ಮಾಲಿನ್ಯವಾಗುತ್ತದೆ. ನಿತ್ಯ ಕಾರ್ಮಿಕರ ಗಲಾಟೆಯಿಂದಲೂ ಮಕ್ಕಳ ವ್ಯಾಸಂಗಕ್ಕೆ ಅಡ್ಡಿಯಾಗುತ್ತದೆ. ಇದರಿಂದ ಮಕ್ಕಳಿಗೆ ಹಾಗೂ ನಿಲಯದ ಮಕ್ಕಳಿಗೆ ಆರೋಗ್ಯದ ಮೇಲೆ ಪರಿಣಾಮವಾಗಲಿದೆ. ಈ ಆದೇಶವನ್ನು ರದ್ದುಮಾಡದೇ ಹೋದಲ್ಲಿ ಕಾನೂನು ಮೊರೆ ಹೋಗಬೇಕಾಗುತ್ತದೆ ಹಾಗೂ ದಂಡಾಧಿಕಾರಿಗಳು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ ಎಂದು ಸಿಐಟಿಯು ಕಾರ್ಯದರ್ಶಿ ಗುನ್ನಳ್ಳಿ ರಾಘವೇಂದ್ರ ಹೇಳಿದರು. ಸಂಘಟನೆಯ ಮುಖಂಡರಾದ ಡಿ. ನಾಗರಾಜ್, ಟಿ ಮಂಜಣ್ಣ, ಪಿ. ಗುರುಸ್ವಾಮಿ, ಆರ್. ಮಂಜುನಾಥ, ವಿ. ಅಜ್ಜಪ್ಪ, ಡಿ. ಮುತ್ತಪ್ಪ, ಅಭಿಷೇಕ, ಕೆ. ಶಿವರಾಜ್, ಶಿವಣ್ಣ, ಟಿ. ಚಿತ್ರಪ್ಪ, ಡಿ. ಮಹಾಂತೇಶ್, ಡಿ.ಎ. ಸುದೀಪ, ಸಂತೂ, ಎನ್. ಅರುಣ, ಡಿ. ಬಸವರಾಜ್, ದರ್ಶನ ಸೇರಿದಂತೆ ಇತರರಿದ್ದರು.

## ವಿದ್ಯುತ್ ಕಳ್ಳತನ ಪ್ರಕರಣ – ಶಿಕ್ಷೆ

### ರೂ.18,02,951/– ದಂಡ । ನ್ಯಾಯಾಧೀಶರಾದ ವಿದ್ಯಾಧರ ಶಿರಹಟ್ಟಿ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**

ಏಳುಬೆಂಚಿಯ ಆರ್‌ಓ ಪ್ಲಾಂಟ್‌ನ ಪೂರ್ಣಿಮ ಎಂಟರ್ ಪ್ರೈಸಸ್‌ನ ಮಾಲೀಕರಾದ ಅಮರೇಶ್ವರ ಶಾಸ್ತ್ರಿ ಇವರಿಗೆ ಮಂಜೂರಾದ ಹಾಲಿ ವಿದ್ಯುತ್ ಮಾಪಕವನ್ನು ಬೈಪಾಸ್ ಮಾಡಿಕೊಂಡು ಅನಧಿಕೃತವಾಗಿ ತಮ್ಮ ಇಂಡಸ್ಟ್ರಿಯ ವಿದ್ಯುತ್ ಉಪಕರಣಗಳಿಗೆ ಕಳ್ಳತನದಿಂದ ವಿದ್ಯುತ್ ಉಪಯೋಗಿಸಿ ಅನಧೀಕೃತ ಲಾಭ ಪಡೆದು ಜೆಸ್ಕಾಂ ಕಂಪನಿಗೆ ಹಾನಿ ಮಾಡಿರುವುದರಿಂದ ರೂ.18,02,951/– ದಂಡ ಮತ್ತು ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳ ಸಾದಾ ಶಿಕ್ಷೆ ವಿಧಿಸಿ ಇಲ್ಲಿನ 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ವಿದ್ಯಾಧರ ಶಿರಹಟ್ಟಿ ಅವರು ಆದೇಶಿಸಿದ್ದಾರೆ.

2022ರ ಆ.18 ರಂದು ಬೆಳಿಗ್ಗೆ 10.39 ಗಂಟೆಗೆ ಜೆಸ್ಕಾಂ ಜಾಗೃತ ದಳದ ಎಇ ಕೆ.ಗಾದಿಲಿಂಗಪ್ಪ ತಮ್ಮ ಸಿಬ್ಬಂದಿಯವರೊಂದಿಗೆ ವಿವಿಧೆಡೆ ವಿದ್ಯುತ್ ಕಳ್ಳತನ ಪ್ರಕರಣ ಪತ್ತೆಗಾಗಿ ಹೋದಾಗ ಕಂಡುಬಂದಿದ್ದು, ಇವರ ಮೇಲೆ ಕ್ರಮ ಕೈಗೊಳ್ಳಲು ಮುದ್ದೆ ಮಾಲುನೊಂದಿಗೆ ಜೆಸ್ಕಾಂ ಇಲಾಖೆಯವರು ಲಿಖಿತ ದೂರು ನೀಡಿದ್ದರು.

ಪ್ರಕರಣದ ಸಾಕ್ಷಿದಾರರ ವಿಚಾರಣೆಯಿಂದ ಹಾಗೂ ತನಿಖೆಯಿಂದ ಆರೋಪಿತರ ವಿರುದ್ಧ ಆರೋಪ ಸಾಬಿತಾಗಿದ್ದರಿಂದ ಕಲಂ: 135(1) ವಿದ್ಯುತ್ ಅಧಿನಿಯಮ 2003 ರ ರೀತ್ಯ ನ್ಯಾಯಾಲಯಕ್ಕೆ ಈ ದೋಷಾರೋಪಣ ಪತ್ರ ಸಲ್ಲಿಸಿಕೊಂಡಿರುತ್ತದೆ. ಪ್ರಕರಣದಲ್ಲಿ ಸಾಕ್ಷ್ಯ ವಿಚಾರಣೆಯಾದ ನಂತರ ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯವು ಆರೋಪಿ ಅಮರೇಶ್ವರ ಶಾಸ್ತ್ರಿ ಗೆ ಜ.20 ರಂದು ತೀರ್ಪು ನೀಡಿದೆ. ತನಿಖಾಧಿಕಾರಿ ಆರ್.ಗಾಯತ್ರಿ ಪಿ.ಐ., ಜೆಸ್ಕಾಂ ಜಾಗೃತದಳರವರು ದೋಷಾರೋಪಣ ಪತ್ರ ಸಲ್ಲಿಸಿದ್ದರು. ಬಿ.ಜೆ.ರೆಹಮಾನ್, ಪಿ.ಸಿ. ಸಾಕ್ಷಿಗಳ ವಿಚಾರಣೆ ಕಾಲಕ್ಕೆ ಸಹಕರಿಸಿದ್ದರು. ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕ ಶೇಖರಪ್ಪ ಅಭಿಯೋಜನೆ ಪರವಾಗಿ ವಾದ ಮಂಡಿಸಿದ್ದರು.

## ಮಹಾಕುಂಭಮೇಳದಲ್ಲಿ ಕಾಶಿ ಜಗದ್ಗುರುಗಳ ಆಶೀರ್ವಚನ ಪಡೆದ ಶ್ರೀಗಳು– ಭಕ್ತರು



ಹೊಸಪೇಟೆಯ ಸಿದ್ಧಲಿಂಗಯ್ಯ ತಾತ, ಕಂಪ್ಲಿಯ ಕಲ್ಯಾಣಿಚೌಕಿಮಠದ ಬಸವರಾಜಶಾಸ್ತ್ರಿಗಳು, ಪ್ರಯಾಗರಾಜ್ ಮಹಾಕುಂಭಮೇಳದ ತ್ರಿವೇಣಿ ಸಂಗಮದ ದಶಾಶ್ವಮೇಧಘಾಟ್ ಕಾಶಿಪೀಠದ ಜಂಗಮವಾಡಿ ಶಾಖಾ ಮಠದ ಆವರಣದಲ್ಲಿ, ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದಂಗಳವರನ್ನು ಪೂಜಿಸಿ ಆಶೀರ್ವಚನ ಪಡೆದುಕೊಂಡರು. ಪ್ರಮುಖರಾದ ಹರಗಿನಡೋಣಿಯ ಶ್ರೀಅಭಿನವ ಸಿದ್ಧಲಿಂಗಮಹಾಸ್ವಾಮೀಜಿ, ಮಿಂಚೇರಿ ಓಂಕಾರಸ್ವಾಮಿ, ಚೇತನಸ್ವಾಮಿ ಇತರರಿದ್ದರು.

## ಬೆಳಕಿನ ಹಾದಿ

# ಅಭದ್ರ ಸ್ನೇಹ ಸಂಬಂಧಗಳು



ಜೀವನ ಎನ್ನುವ ಪ್ರಯಾಣದಲ್ಲಿ ಕೆಲವು ಸ್ನೇಹ ಸಂಬಂಧಗಳು ನಮಗೆ ಗೊತ್ತಿಲ್ಲದಂತೆ ಅವರಿಸಿಕೊಳ್ಳುತ್ತವೆ. ಗಂಡ ಮನೆ ಮಕ್ಕಳು ಅಂತ ಬದುಕುವ ಪ್ರತಿ ಹೆಣ್ಣು ಮಕ್ಕಳು ತಮಗೆ ಬೇಕಾದವರ ಜೊತೆ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾಳೆ. ಕೆಲವರು ನಂಬಿಕೆ ಅರ್ಹರಾಗಿರುತ್ತಾರೆ. ಇನ್ನು ಕೆಲವರು ಅನರ್ಹರಾಗಿರುತ್ತಾರೆ. ಕೆಲವರು ಅದರ ದುರುಪಯೋಗ ತೆಗೆದುಕೊಳ್ಳುತ್ತಾರೆ. ಈವಾಗಿನ ಕಾಲದಲ್ಲಿ ಮುಖವಾಡ ಹಾಕಿ ಬದುಕುವ ಜನವೇ ಜಾಸ್ತಿ. ನಾವು ನಂಬಿದವರಿಂದ ನಮಗೆ ಮೋಸ ಆದಾಗ ಆಗುವ ಅಘಾತ ತುಂಬಾ ಅಪಾಯಕಾರಿ. ಅದನ್ನು ಜೀರ್ಣಿಸಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ. ನಮ್ಮ ಜೊತೆನೇ ಇದ್ದು ನಮಗೆ ಗೊತ್ತಿಲ್ಲದಂತೆ ಚೆನ್ನಾಗಿ ಚೂರಿ ಹಾಕುವವರೇ ಹೆಚ್ಚು. ಸ್ನೇಹಾ ಎನ್ನುವ ಮಹಿಳೆ ವೀಣಾ ಅನ್ನುವವಳನ್ನು ತುಂಬಾ ಹಚ್ಚಿಕೊಂಡಿರುತ್ತಾಳೆ. ಮನೆಯಲ್ಲಿ ನಡೆಯುವ ಪ್ರತಿಯೊಂದನ್ನು ವೀಣಾಳ ಹತ್ತಿರ ಹೇಳುತ್ತಿರುತ್ತಾಳೆ. ಅವಳು ಸ್ನೇಹಾಳ ವಿಕ್‌ನೆಸ್ ತಿಳಿದುಕೊಂಡು ಅವಳನ್ನು ಬುಗುರಿಯಂತೆ ಆಡಿಸುತ್ತಿರುತ್ತಾಳೆ. ಯಾರಿಗು ಹೆದರಬೇಡ ಜಗಳ ಮಾಡು ನಿನ್ನ ಸ್ಥಾನಮಾನ ಗಟ್ಟಿ ಮಾಡಿಕೋ ಅಂತಾ ಪ್ರಚೋದಿಸುತ್ತಿರುತ್ತಾಳೆ. ಸ್ನೇಹಾ ಹಾಗೇ ಮಾಡುತ್ತಿರುತ್ತಾಳೆ. ತನಗೆ ಗೊತ್ತಿಲ್ಲದಂತೆ ತನ್ನ ಸಂಸಾರವನ್ನು ತಾನೇ ಹಾಳು ಮಾಡಿಕೊಳ್ಳುತ್ತಾಳೆ. ಮನುಷ್ಯರ ಮನಸ್ಸು ಯಾವಾಗಲು ಹೊಗಳಿಕೆಗಾಗಿ ತುಡಿಯುತ್ತಿರುತ್ತದೆ. ನಮ್ಮ ಸಾಮರ್ಥ್ಯ ಏನು ಅಂತಾ ನಮಗೆ ಗೊತ್ತಿದ್ದರೆ ಸಾಕು. ವಯಸ್ಸಾದಂತೆಲ್ಲಾ ನಮಗೆ ದೊರಕುವ ಅನುಭವಗಳು ನಮ್ಮನ್ನು ಗಟ್ಟಿಯಾಗಿರುವಂತೆ ಮಾಡುತ್ತವೆ. ಆತ್ಮವಿಶ್ವಾಸ ಇದ್ದರೆ ನಮ್ಮ ಜೀವನವನ್ನು ಧೈರ್ಯದಿಂದ ಮುನ್ನಡೆಸಿಕೊಂಡು ಹೋದರೆ ಆಯಿತು. ಹೆಣ್ಣಿಗೆ ಪ್ರತಿದಿನವು ಒಂದೊಂದು ಹೊಸ ಪಾಠ ಬದುಕಿನಲ್ಲಿ ನಡೆಯುವ ಎಲ್ಲ ವಿಷಯಗಳು ನಮ್ಮ ಒಳಿತಿಗಾಗಿ ಅಂದುಕೊಂಡರೆ ಆಯಿತು. ಮುಂಬರುವ ಎಲ್ಲ ಸಮಸ್ಯೆಗಳಿಗೆ ಕಡಿವಾಣ ಹಾಕಿ ಜೀವನ ಮಾಡಬೇಕು. ನಾವು ಇಷ್ಟಪಡುವ ಬದುಕನ್ನು ಊಹಿಸಿಕೊಳ್ಳುವ ಶಕ್ತಿ ನಮಗೆ ಇದ್ದೇ ಇರುತ್ತದೆ. ಪ್ರೀತಿ ಕರುಣೆ ನಂಬಿಕೆ ಈ ಪದಗಳಿಗೆ ಅರ್ಥವೇ ಇಲ್ಲ. ಇದೇ ಕಲಿಯುಗ. ಸಕ್ಕರೆ ಸಹವಾಸ ಮಾಡಿ ಹಾಲು ಸಿಹಿಯಾಗುತ್ತದೆ. ಹುಳಿಯ ಸಹವಾಸ ಮಾಡಿ ಹಾಲು ಒಡೆದು ಹೋಗುತ್ತದೆ. ಅದೇ ರೀತಿ ಬದುಕು ಕೂಡ ಒಳ್ಳೆಯವರ ಸಹವಾಸ ಮಾಡಿದರೆ ಜೀವನ ಸುಖಮಯವಾಗುತ್ತದೆ. ಕೆಟ್ಟವರ ಸಹವಾಸ ಮಾಡಿದರೆ ಜೀವನ ಒಡೆದುಹೋಗುತ್ತದೆ.

– ಜಯಶ್ರೀ.ಎಂ.ಕರ್ಜಗಿ ಹುಬ್ಬಳ್ಳಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಹಂಪಿ ಟೈಮ್ಸ್
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ**

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ದಾಸರೆಂದರೆ ಪುರಂದರ ದಾಸರಯ್ಯ

ದಾಸ ಸಾಹಿತ್ಯದಲ್ಲೇ ಶ್ರೇಷ್ಠರಾದ ಪುರಂದರದಾಸರು 15ನೇ ಶತಮಾನದವರು. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕ. ಇವರು ವರದಪ್ಪ ನಾಯಕ ಹಾಗೂ ರುಕ್ಮಿಣಿ ಅವರ ಸುಪುತ್ರ. ಈ ದಂಪತಿಗಳಿಗೆ ಹಲವು ವರ್ಷಗಳಿಂದ ಮಕ್ಕಳಿಲ್ಲದ ಕಾರಣ ತಿರುಪತಿಯ ಶ್ರೀನಿವಾಸನಿಗೆ ಪ್ರಾರ್ಥನೆ ಮಾಡಿಕೊಂಡ ಮೇಲೆ ಮಗುವಾಯಿತಂತೆ. ಆ ಮಗುವಿಗೆ ಶ್ರೀನಿವಾಸ ನಾಯಕ ಎಂದು ನಾಮಕರಣ ಮಾಡಿದರು.

ವರದಪ್ಪ ನಾಯಕರು ಚಿನ್ನ ವಜ್ರದ ವ್ಯಾಪಾರಿಗಳಾಗಿದ್ದರು. ಇವರ ನಂತರ ಶ್ರೀನಿವಾಸ ನಾಯಕ ಕೂಡ ತಂದೆಯ ವೃತ್ತಿಯನ್ನು ಮುಂದುವರಿಸಿದ. ಈತನು ಬಹಳ ಜಿಪುಣ. ಯಾರಿಗೂ ಯಾವ ದಾನ ಧರ್ಮವನ್ನು ಮಾಡುತ್ತಿರಲಿಲ್ಲ. ಶ್ರೀನಿವಾಸ ನಾಯಕನು ಸರಸ್ವತಿ ಬಾಯಿಯನ್ನು ವಿವಾಹವಾದನು. ಆಕೆಯು ಮಹಾನ್ ದೈವಭಕ್ತೇ ಸಾಧ್ವಿ ಹಾಗೂ ಆದರ್ಶ ಪತಿವ್ರತೆಯಾಗಿದ್ದಳು. ಈಕೆಯಿಂದಲೇ ಇವನಿಗೆ ಸಾಕ್ಷಾತ್ಕಾರವಾಗಿದ್ದು.

### ಶ್ರೀನಿವಾಸ ನಾಯಕನಿಂದ ಪುರಂದರ ದಾಸರಾದ ಕಥೆ

ಶ್ರೀನಿವಾಸ ನಾಯಕ ಬಹಳ ಜಿಪುಣ. ತನ್ನ ಸ್ವಂತದವರಿಗೂ ಒಂದು ರೂಪಾಯಿ ಕೊಡಲು ಹಿಂದೆ ಮುಂದೆ ನೋಡುತ್ತಿದ್ದ. ಇವನು ರತ್ನ ವಜ್ರಗಳನ್ನು ವ್ಯಾಪಾರ ಮಾಡುವ ಆಗರ್ಭ ಶ್ರೀಮಂತನಾಗಿದ್ದನು. ಒಂದು ದಿನ ಶ್ರೀಹರಿಯು ಬಡ ಬ್ರಾಹ್ಮಣ ವೇಷದಲ್ಲಿ ಬಂದು ತನ್ನ ಮಗನಿಗೆ ಮುಂಜಿ ಇದೆ, ಅದಕ್ಕಾಗಿ ಹಣದ ಅವಶ್ಯಕತೆ ಇದೆ ಸಹಾಯ ಮಾಡಿ ಎಂದು ಬೇಡಿಕೊಂಡನು. ಜಿಪುಣಾಗ್ರೇಸರನಾದ ಶ್ರೀನಿವಾಸನು ನಾಳೆ ಬಾ ಎಂದು ಹೇಳುತ್ತಾ, ದಿನವನ್ನು ದೂಡುತ್ತಿದ್ದನು. ಆರು ತಿಂಗಳ ಕಾಲ ಬಡ ಬ್ರಾಹ್ಮಣನು ಪ್ರತಿನಿತ್ಯ ಬಂದು ಇವನಲ್ಲಿ ಸಹಾಯ ಮಾಡುವಂತೆ ಬೇಡಿಕೊಳ್ಳುತ್ತಿದ್ದನು. ಕೊನೆಗೆ ಇವನ ಕಾಟತಾಳಲಾರದೆ ಶ್ರೀನಿವಾಸ ನಾಯಕ ಒಂದು ಸವೆದ ನಾಣ್ಯವನ್ನು ಅವನಿಗೆ ಕೊಟ್ಟು ಕಳುಹಿಸಿದನು.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful HAMPI TIMES E-paper

ಮಾರನೇ ದಿನ ಅದೇ ಬ್ರಾಹ್ಮಣನು ಶ್ರೀನಿವಾಸ ನಾಯಕನ ಮನೆಗೆ ಬಂದು, ಸರಸ್ವತಿ ಬಾಯಿಯ ಹತ್ತಿರ ತನ್ನ ಮಗನ ಮುಂಜಿಗಾಗಿ ಸಹಾಯ ಮಾಡುವಂತೆ ಮನವಿ ಮಾಡಿಕೊಂಡನು. ಸರಸ್ವತಿ ಬಾಯಿ ಅಸಾಹಾಯಕಳಾಗಿದ್ದಳು. ಅವಳಿಗೆ ಸಹಾಯ ಮಾಡುವ ಮನಸ್ಸಿದ್ದರೂ ಗಂಡನ ಅಪ್ಪಣೆ ಇಲ್ಲದೆ ಏನನ್ನು ಕೊಡಲಾಗದ ಪರಿಸ್ಥಿತಿ ಅವಳದಾಗಿತ್ತು. ತನ್ನ ಬಳಿ ನಿಮಗೆ ಕೊಡಲು ಏನೂ ಇಲ್ಲ ಎಂದು ಸರಸ್ವತಿ ಬಾಯಿ ಬ್ರಾಹ್ಮಣನಲ್ಲಿ ಬೇಸರ ವ್ಯಕ್ತಪಡಿಸಿದಳು. ಆಗ ಅವನು ನಿನ್ನ ತವರಿನಲ್ಲಿ ಕೊಟ್ಟ ಮೂಗುತಿ ಇದೆಯಲ್ಲ ಎಂದು ನೆನಪಿಸಿದನು. ಹಾಗೆ ಅದನ್ನೇ ಕೊಡುವಂತೆ ಸೂಚಿಸಿದನು. ಸರಸ್ವತಿ ಬಾಯಿ ಮೂಗುತಿಯನ್ನು ಬ್ರಾಹ್ಮಣನಿಗೆ ಕೊಟ್ಟು ಕಳುಹಿಸಿದಳು.



ಆ ಬ್ರಾಹ್ಮಣನು ಶ್ರೀನಿವಾಸ ನಾಯಕನ ಬಳಿ ಮೂಗುತಿಯನ್ನು ಅಡವಿಟ್ಟು ಹಣವನ್ನು ಕೊಡುವಂತೆ ಕೇಳಿದನು. ಶ್ರೀನಿವಾಸ ನಾಯಕನಿಗೆ ಅದು ತನ್ನ ಹೆಂಡತಿಯ ಮೂಗುತಿ ಇರಬಹುದೇ ಎಂಬ ಅನುಮಾನ ಬಂದಿತು. ಹಾಗಾಗಿ ನಾಳೆ ಬಾ ಹಣ ಕೊಡುವೆ ಎಂದು ಹೇಳಿ ಬ್ರಾಹ್ಮಣನನ್ನು ಕಳುಹಿಸಿದನು. ಮೂಗುತಿಯನ್ನು ಭದ್ರವಾಗಿ ಪೆಟ್ಟಿಗೆಯಲ್ಲಿ ಇಟ್ಟು ಬೀಗ ಹಾಕಿ ಮನೆಗೆ ಹೋದನು.

ಮನೆಗೆ ಬಂದ ತಕ್ಷಣವೇ ಸರಸ್ವತಿ ಬಾಯಿಯ ಬಳಿ ನಿನ್ನ ಮೂಗುತಿ ಎಲ್ಲಿ ಎಂದು ಪ್ರಶ್ನಿಸಿದನು. ನಿಜವನ್ನು ಹೇಳಲಾರದೆ ಹೆದರಿ ಆಕೆಯು ಸ್ನಾನ ಮಾಡುವಾಗ ತೆಗೆದಿಟ್ಟಿದ್ದೇನೆ ಎಂದು ಉತ್ತರಿಸಿದಳು. ಅದನ್ನು ತೆಗೆದುಕೊಂಡು ಬಾ ಎಂದು ಶ್ರೀನಿವಾಸ ನಾಯಕ ಹೇಳಿದಾಗ ಚಿಂತಾಕ್ರಾಂತಳಾದ ಸರಸ್ವತಿ ಬಾಯಿ ವಿಷವನ್ನು ಕುಡಿಯಲು ಮುಂದಾದಳು. ಆಗ ಆ ವಿಷದ ಬಟ್ಟಲೊಳಗೆ ಮೇಲಿನಿಂದ ಮೂಗುತಿ ಬಿದ್ದಿತ್ತು. ಅವಳಿಗೆ ಆಶ್ಚರ್ಯವಾಯಿತು. ಮೂಗುತಿಯನ್ನು ಸಂತೋಷದಿಂದ ತೆಗೆದುಕೊಂಡು ಹೋಗಿ ಪತಿ ದೇವರಿಗೆ ಕೊಟ್ಟಳು. ಶ್ರೀನಿವಾಸ ನಾಯಕ ಅಂಗಡಿಗೆ ಬಂದು ಪೆಟ್ಟಿಗೆಯನ್ನು ತೆಗೆದು ನೋಡಿದರೆ ಅವನು ಇಟ್ಟಿದ್ದ ಮೂಗುತಿ ಅಲ್ಲಿರಲಿಲ್ಲ. ಸರಸ್ವತಿ ಬಾಯಿಯು ಸತ್ಯ ಮುಂಚಿಡಲಾರದೆ ಬಡ ಬ್ರಾಹ್ಮಣ ಮನೆಗೆ ಬಂದ ವಿಷಯವನ್ನು ವಿವರವಾಗಿ ಶ್ರೀನಿವಾಸ ನಾಯಕನ ಬಳಿ ಹೇಳಿದಳು. ಆತನಿಗೆ ಆಗ ಜ್ಞಾನೋದಯವಾಗಿ, ಸಾಕ್ಷಾತ್ ನಾರಾಯಣನೇ ನನ್ನನ್ನು ಪರೀಕ್ಷಿಸಲು ಬ್ರಾಹ್ಮಣ ರೂಪದಲ್ಲಿ ಬಂದಿದ್ದನು ಎಂಬ ಅರಿವಾಯಿತು.

ನಂತರ ಶ್ರೀನಿವಾಸ ನಾಯಕ ಎಲ್ಲಾ ಶ್ರೀಮಂತಿಕೆಯನ್ನು ತೊರೆದು ವ್ಯಾಸರಾಯರ ಬಳಿ ದಾಸ ದೀಕ್ಷೆಯನ್ನು ಪಡೆದು ಪುರಂದರ ದಾಸರಾದರು. ಕೊರಳಲ್ಲಿ ತುಳಸಿ ಮಾಲೆ, ಹಣೆಗೆ ಗೋಪಿ ಚಂದನದ ನಾಮ ಇಡುತ್ತಾ, ತಾಳ, ತಂಬೂರಿ ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಹಾಡುತ್ತಾ ದಾಸರು ಭಕ್ತಿಯ ಬೀಜವನ್ನು ಜನಸಾಮಾನ್ಯರ ಮನದಲ್ಲಿ ಬಿತ್ತಿದರು. ಪುರಂದರದಾಸರು ಕರ್ನಾಟಕ ಸಂಗೀತ ಪದ್ಧತಿಗೆ ಭದ್ರವಾದ ಬುನಾದಿಯನ್ನು ಹಾಕಿ ಕೊಟ್ಟರು. ಶಾಸ್ತ್ರೀಯ ಸಂಗೀತವನ್ನು ಶ್ರೀಸಾಮಾನ್ಯರಿಗೆ ಪರಿಚಯಿಸಿ ಕೊಟ್ಟರು. ಭಕ್ತಿ ಮಾರ್ಗವನ್ನು ದೇವರ ನಾಮದ ಮೂಲಕ ಜನಸಾಮಾನ್ಯರಿಗೆ ಪರಿಚಯಿಸಿ ಕೊಡುವುದು ಅವರ ಉದ್ದೇಶವಾಗಿತ್ತು.ಪುರಂದರದಾಸರುಮದ್ವಸಿದ್ಧಾಂತದಪ್ರತಿಪಾದಕರಾಗಿದ್ದರು.

ಪುರಂದರದಾಸರು ಸುಮಾರು 4,75,000 ಕೃತಿಗಳನ್ನು ರಚಿಸಿದ್ದಾರೆ ಎಂದು ಹೇಳಲಾಗುತ್ತದೆ. ಇವರ ಕೃತಿಯಲ್ಲಿ ಸರಳವರಸೆ, ಜಂಟಿ ವರಸೆ, ಅಲಂಕಾರಗಳು, ಕೀರ್ತನೆ ಉಗಾಭೋಗ, ಮುಂಡಿಗೆ, ಗದ್ಯ ಮುಂತಾದ ಶೈಲಿಯಲ್ಲಿ ದೇವರಸ್ತುತಿ, ನಿಂದಾಸ್ತುತಿ, ನೀತಿಕವನ, ಒಗಟಿನ ಕವನ, ಸಂದೇಶಪೂರಿತ ಕೃತಿ, ಪ್ರಕೃತಿ ಪರಿಚಯ, ಪರಮಾತ್ಮನ, ಲಕ್ಷ್ಮಿ ಸರಸ್ವತಿ ಇತರ ದೇವ ದೇವಿಯರ ಸ್ತುತಿ ಮುಂತಾದವುಗಳನ್ನು ರಚಿಸಿದ್ದಾರೆ. ಇವರ ಹರಿಭಕ್ತಿ ಹಾಗೂ ಸಂಗೀತದಲ್ಲಿನ ಪಾಂಡಿತ್ಯ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದು ದಾಸ ಸಾಹಿತ್ಯವನ್ನು ಶ್ರೀಮಂತವಾಗಿಸಿದೆ.ಪುರಂದರ ವಿಠ್ಠಲ ಇವರ ಅಂಕಿತನಾಮ.

ಪುರಂದರದಾಸರು ಕರ್ನಾಟಕ ಸಂಗೀತವನ್ನು ಕಲಿಸುವ ವ್ಯವಸ್ಥೆಯನ್ನು ರೂಪಿಸಿದರು. ಇವರು ಮೇಳ ಕರ್ತರಾಗಗಳನ್ನು ಒಳಗೊಂಡಂತೆ 84 ರಾಗಗಳನ್ನು ಗುರುತಿಸಿದ್ದಾರೆ. ಕರ್ನಾಟಕ ಸಂಗೀತದ ಮೇಲೆ ಇವರ ಪ್ರಭಾವ ಗಾಢವಾಗಿದೆ. ಹಾಗಾಗಿ ಇವರನ್ನು ಕರ್ನಾಟಕ ಸಂಗೀತದ ಪಿತಾಮಹ ಎಂದು ಕರೆಯಲಾಗುತ್ತದೆ. ಪುರಂದರ ದಾಸರ ಸಾಧನೆಯನ್ನು ಕಂಡ ಸರ್ವರೂ ದಾಸರೆಂದರೇ ಪುರಂದರ ದಾಸರಯ್ಯ ಎಂದು ಕೊಂಡಾಡಿದ್ದಾರೆ.

**ಮನ್ಮನೋಭೀಷ್ಟ ವರದಂ ಸರ್ವಾಭೀಷ್ಟ ಫಲಪ್ರದಂ!**
**ಪುರಂದರ ಗುರು ವಂದೇ ದಾಸ ಶ್ರೇಷ್ಠಂ ದಯಾನಿಧಿಂ!!**

## ಜೀವನ ಸಂಸ್ಕಾರಕ್ಕೆ ಮಾತೃ ದೇವತೆಯೇ ಮೊದಲ ಗುರು

# ಸಂಸ್ಕಾರವಂತನು ಎಂದೂ ಭ್ರಷ್ಟನಾಗಲಾರ

ಸಂಸ್ಕಾರ' ಎಂದರೇನು? ಈ ಶಬ್ದಕ್ಕೆ ತುಂಬ ವಿಸ್ತಾರವಾದ ಅರ್ಥಾಂಶ ಉಂಟು. ವೇದ ಶಾಸ್ತ್ರಗಳ ಪ್ರಕಾರ ವಿವಿಧ ಧರ್ಮಗಳಲ್ಲಿಯ ವೈಧಿಕ, ಸಾಂಪ್ರದಾಯಿಕ ನೀತಿ ನಿಯಮಗಳು ಸಂಸ್ಕಾರವೆಂದೇ ಪರಿಗಣಿಸಲ್ಪಡುತ್ತವೆ. ಅಲ್ಲದೇ ಪರಂಪರೆಯಿಂದ ನಡೆದು ಬಂದ ರೀತಿ ನೀತಿಗಳು ಕೂಡಾ ಸಂಸ್ಕಾರಗಳಾಗಿ ರೂಪುಗೊಂಡಿರಲು ಸಾಕು.

ಆದರೆ ಸಾಮಾಜಿಕ ಬದುಕಿನ ಸಂಸ್ಕಾರವೆನ್ನುವುದು ಇಡೀ ಮಾನವ ಜನಾಂಗಕ್ಕೆ ಅವನ ಬದುಕಿನ ರೀತಿ, ನೀತಿ ನಡುವಳಿಕೆಗೆ ಸಂಬಂಧಿಸಿದ್ದು. ಈ ವಿಷಯವಾಗಿ ತತ್ವಜ್ಞಾನಿಗಳು, ತಪಸ್ವಿಗಳು, ಮಠ ಮಾನ್ಯ ಪೀಠಾಧೀಶರು, ಪುರಾಣ, ಗೀತೆ, ಪ್ರವಚನ ಹೀಗೆ ಅನೇಕ ಪ್ರಾಕಾರಗಳ ಸಂದರ್ಭಗಳಲ್ಲಿ ವಿಶ್ಲೇಷಿಸಿದ್ದೂ ಉಂಟು. "ಯಾವುದೇ ಮನುಷ್ಯ ಅದೆಷ್ಟು ಅಕ್ಷರ ಕಲಿತರೂ ಭ್ರಷ್ಟನಾಗಬಹುದು, ಆದರೆ ಒಬ್ಬ ಸಂಸ್ಕಾರವಂತನು ಎಂದೂ ಭ್ರಷ್ಟನಾಗಲಾರ" ಎಂದು ವಿಜಯಪುರ ಜ್ಞಾನಯೋಗಾಶ್ರಮದ ಮಹಾನ್ ತತ್ವಜ್ಞಾನಿ ಶ್ರೀ ಸಿದ್ಧೇಶ್ವರ ಸ್ವಾಮಿಜಿ ಉಪದೇಶಿಸಿದ್ದು ಸತ್ಯ. ಈ ಎಲ್ಲದರ ಹಿಂದೆ ಇರುವ ಉದ್ದೇಶ ಒಂದೇ. ಮನುಷ್ಯ ರಾಗದ್ವೇಷ, ಮತ್ಸರ, ಕಪಟ ವಂಚನೆ, ಇತ್ಯಾದಿ ದುರ್ಗುಣಗಳನ್ನು ಬಿಟ್ಟು, ದೈವತ್ವ ಭಾವನೆಹೊಂದಿ ಸಹಕಾರ, ತಾಳ್ಮೆ, ತೃಪ್ತಿ, ನಿತ್ಯ ಸತ್ಕರ್ಮದೊಂದಿಗೆ ಜೀವನದಲ್ಲಿ ಉತ್ತಮ ನಡುವಳಿಕೆ ಅಳವಡಿಸಿಕೊಂಡು ಶಾಂತಿ ನೆಮ್ಮದಿ ಮತ್ತು ಆನಂದದ ಜೀವನ ಸಾಗಿಸಿ ಸದ್ಗತಿ ಹೊಂದಲಿ ಎಂದು.

ಪ್ರಸ್ತುತ ಪ್ರಪಂಚದಲ್ಲಿ ಎಲ್ಲವನ್ನೂ ಕೂಲಂಕುಷ ಅಭ್ಯಸಿಸಿ ನಡುವಳಿಕೆಯಲ್ಲಿ ಅಳವಡಿಸಿಕೊಳ್ಳುವುದು ಸ್ವಲ್ಪ ಕಷ್ಟ ಸಾಧ್ಯವೇ ಎನ್ನಿಸಬಹುದು. ಆದರೆ ತಕ್ಕ ಮಟ್ಟಿಗೆಯಾದರೂ ಸಾಮಾಜಿಕ ಬದುಕಿನಲ್ಲಿ ಅರ್ಥೈಸಿಕೊಳ್ಳದಿದಿದ್ದರೆ ಹೇಗೆ? ಸ್ವಯಂ ತಾನು, ತನ್ನ ಸ್ವಭಾವ ದೈವ ಭಕ್ತಿ, ಆಚಾರ ವಿಚಾರ, ನಡೆ-ನುಡಿ ಮತ್ತು ಕರ್ತವ್ಯ ಹೇಗಿರಬೇಕು? ಬಂಧು ಬಾಂಧವರು, ಗುರು ಹಿರಿಯರು, ಸಮಾಜ, ಇತರರು ಮಾಡುವ ಕೆಲಸ, ಚಿಕ್ಕವರು, ಸಹಪಾಠಿಗಳು, ಪ್ರಕೃತಿ, ಪ್ರಾಣಿ ಪಕ್ಷಿ ಇತರ ಎಲ್ಲರೊಂದಿಗೆ ಸಾಂದರ್ಭಿಕ ವರ್ತನೆಗಳಲ್ಲಿ ಯೋಗ್ಯ ರೀತಿಯಲ್ಲಿ ಗೋಚರಿಸಿಕೊಳ್ಳುವುದೇ ಸರಳ ಭಾಷೆಯಲ್ಲಿ 'ಸಂಸ್ಕಾರ' ಎಂದು ಕರೆದರೆ ತಪ್ಪೇನಿಲ್ಲ.



ಲಕುಮಿಸುತ ಸಾರವಾಡ
ಮೊ: 9449598373

Scan For Digital Colourful HAMPI TIMES E-paper

ಈ ಸಂಸ್ಕಾರ ಕೆಲವರಿಗೆ ಅವರವರ ಪೂರ್ವ ಜನ್ಮದ ಕರ್ಮದಿಂದ ಹುಟ್ಟಿನಿಂದಲೇ ಬಂದಿರಲು ಸಾಕು. ಮತ್ತೆ ಕೆಲವರು ಜನ್ಮಿಸಿದ ಮೇಲೂ ಪಡೆದುಕೊಳ್ಳಲು ಸಾಧ್ಯ. ನೋಡಿ ತಿಳಿದುಕೊಳ್ಳುವುದು, ತಪ್ಪಿನ ಅರಿವಾಗಿ ತಿದ್ದಿಕೊಳ್ಳುವುದು, ಅವರವರ ಧರ್ಮ ಗುರುಗಳ ಸತ್ಸಂಗ ಪಾಠ ಪ್ರವಚನಗಳಲ್ಲಿ ಭಾಗವಹಿಸುವುದು, ಸಾಮಾಜದ ಹಿರಿಯ ಅನುಭವಿಗಳು ಮತ್ತು ಗೆಳೆಯ ಬಂಧು ಬಾಂದವರಿಂದಲೂ, ಅಲ್ಲದೇ ಶೈಕ್ಷಣಿಕವಾಗಿ ಅಭ್ಯಸಿಸಿ ಅರ್ಥೈಸಿಕೊಳ್ಳುವುದು, ಇತ್ಯಾದಿ ಮಾರ್ಗಗಳಿಂದ ತಿಳಿದುಕೊಳ್ಳಲು ಸಾಧ್ಯ. ಉತ್ತಮ ಸಂಸ್ಕಾರ ಪಡೆಯಲು ಬೇಕಾದಷ್ಟು ಮಾರ್ಗಗಳಿವೆ. ಯಾಕೆಂದರೆ, ಇದು ಜಾತಿಮತ ಪಂಥ ಹೊರತಾಗಿ ಸರ್ವರಿಗೂ ಅಗತ್ಯವಿರುವ ತಿಳುವಳಿಕೆ.



ಆದರೆ.... ಏನನ್ನೂ ಓದದ, ಯಾರಿಂದಲೂ ಕಲಿಯದ, ದೈವದತ್ತ ಕಾಣಿಕೆಯಾಗಿ ಅತ್ಯುತ್ತಮ ಸಂಸ್ಕಾರವನ್ನು ನೀಡಿ, ಬದುಕನ್ನು ಹಸನಾಗಿಸಿ ಬಾಳಿಸುವ ನಿಟ್ಟಿನಲ್ಲಿ ಸಮಾಜಮುಖಿಯಾಗಿ ಹೆಜ್ಜೆ ಇಡುವಂತೆ ಮಾಡುವ ಹೃದಯ ಶ್ರೀಮಂತಿಕೆ ಇರುವ ವ್ಯಕ್ತಿ ಎಂದರೆ ಅದು "ತಾಯಿ"

"ಜನನಿ ತಾನೇ ಮೊದಲ ಗುರು". " ಮಾತೃ ದೇವೋಭವ" "ತಾಯಿಗಿಂತ ದೇವರಿಲ್ಲ" ಎಂಬೆಲ್ಲ ನುಡಿಗಳು ಅಕ್ಷರಶಃ ಸತ್ಯವಾದುದು. ಜೀವನ ಸಂಸ್ಕಾರಕ್ಕೆ ತಾಯಿಯೇ ಮೊದಲ ಗುರು.

ಮೊದಲು, ತಾಯಿ ತಾನು ಗರ್ಭವನ್ನು ಧರಿಸಿದಾಗಿನಿಂದ " ದೇವರೇ ನನ್ನ ಉದರದಲ್ಲಿ ಬೆಳೆಯುವ ಮಗುವು ಚೆನ್ನಾಗಿ ಬೆಳದು ಸುರಕ್ಷಿತವಾಗಿ ಜನ್ಮಿಸಲಿ" ಎಂದು ಆಶಿಸುತ್ತಾಳೆ. ಅಲ್ಲಿಂದಲೇ ಅವಳು ಮಗುವಿಗೆ ನೀಡುವ ಆಶೀರ್ವಾದ ಸಂಸ್ಕಾರದ ಹರಕೆ ಆರಂಭವಾಗುತ್ತದೆ. ಮುಂದೆ ಭೂಮಿಗೆ ಬಂದ, ಏನನ್ನೂ ಹೇಳದ, ಆ ಮಗುವಿನ ಹಸಿವು ಬಾಯಾರಿಕೆ ಆಟ ನೋಟಗಳನ್ನು ಗಮನಿಸುತ್ತ ಕರಳು ಭಾಷೆಯ ಮುಖಾಂತರ ಲಾಲನೆ ಪಾಲನೆಯಲ್ಲಿ ತೊಡಗುತ್ತಾಳೆ.

ಅಂಬೆಗಾಲಿಡುತ್ತ, ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ಮಗುವು ಬೀಳುವಾಗ ಸಂತೈಸಿ ಮತ್ತೆ ಹೆಜ್ಜೆ ಇಡಲು ಹೇಳಿಕೊಡುತ್ತಾಳೆ. ಇದು ಮುಂದೆ ಜೀವನದಲ್ಲಿ ಎಡವಿದರೂ ಮತ್ತೆ ಎದ್ದು ಹೋರಾಡುವ ಶಕ್ತಿ ತುಂಬುವ ಕೆಲಸವೇ ಸರಿ. ನಂತರ ಮಗು ತೊದಲನುಡಿ ಮಾತನಾಡುವಾಗ ಅಮ್ಮ, ಅಪ್ಪ, ಅಣ್ಣ, ತಮ್ಮ, ತಾತಾ, ಅಜ್ಜಿ, ಮಾಮಾ ಇತ್ಯಾದಿಗಳ ಶಬ್ದಗಳನ್ನು ಕಲಿಸುವುದೆಂದರೆ ಸಂಬಂಧಗಳನ್ನು ಸಂಭಾಳಿಸುವ ಸೂತ್ರ. ನಂತರ ಶಾಲೆಗೆ ಹೋಗುವಾಗ ಸ್ನಾನ ಮಾಡಿ ದೇವರಿಗೆ, ಹಿರಿಯರಿಗೆ ನಮಸ್ಕರಿಸಿ ಶಾಲೆಯಲ್ಲಿ ಗುರುಗಳ ಮಾತು ಆಲಿಸಬೇಕು ಎಂದು ಕಿವಿ ಮಾತು ಹೇಳುವುದೆಂದರೆ, ದೈವಿ ಭಕ್ತಿ ಗುಣ ಭರಿಸುವುದು ಎಂದರ್ಥ. ಶಾಲೆಯಲ್ಲಿ ಸಹಪಾಠಿಗಳೊಂದಿಗೆ ಕಲಹ ಮಾಡಿಕೊಂಡು ಬಂದಾಗ 'ಇರಲಿ ಬಿಡು ಮುಂದೆ ಅವನು ಹಾಗೆ ಮಾಡಲ್ಲ

ಈಗ ಸುಮ್ಮನಿರು' ಎಂದು ಸಮಾಧಾನಿಸುವುದು ಸಹನತೆ ತಾಳ್ಮೆಯನ್ನು ಹೇಳಿಕೊಟ್ಟಂತೆ. ಮನೆಯಲ್ಲಿ ಮಾತು ಮಾತಿಗೂ ಹಟ, ಎದುರುತ್ತರಿಸುವುದು ಮಾಡಿದರೆ ಗಧರಿಸಿ ಸುಮ್ಮನಾಗಿರಿಸುವುದೆಂದರೆ ಮೊಂಡ ವಾದವನ್ನು ಮಾಡಬರದು ಎಂಬುದನ್ನು ತಿಳಿಸಿದಂತೆ. ಇದನ್ನೇ ತಿನ್ನು, ಇನ್ನೊಂದು ತುತ್ತು ತಿನ್ನು, ಹೂಂ ಸಾಕು ಬಿಡು, ಬೇಗ ಮಲಗು, ಬೇಗ ಏಳು ಇತ್ಯಾದಿ ಮಾರ್ಗದರ್ಶನದ ನುಡಿಗಳು ಆರೋಗ್ಯದ ಕಡೆಗೆ ಗಮನವಿರಲಿ ಎಂದು ಸೂಚಿಸುವ ಸಂಜ್ಞೆಗಳು. ಇಷ್ಟೆಲ್ಲಾ ಮಾಡುತ್ತಿರುವಾಗ, ಮಗು ತಪ್ಪು ಮಾಡಿದರೆ ' ನೀನು ತಪ್ಪು ಮಾಡಿದ್ದಿಯಾ ನಿನಗೆ ಊಟ ಕೊಡುವುದಿಲ್ಲ' ಎಂದು ಹೇಳುತ್ತಾಳೆ. ಕೆಲ ಸಮಯದ ನಂತರ ಮಗುವು 'ಅಮ್ಮಾ ಇನ್ನೊಮ್ಮೆ ಮಾಡುವುದಿಲ್ಲ ಊಟ ಕೊಡಮ್ಮಾ' ಎಂದಾಗ, 'ಅಯ್ಯೋ ನನ್ನ ಬಂಗಾರಾ ಬಾ ಎಂದು ಕಂಬನಿಗರೆದು ಸಂತೈಸಿ ಊಣಬಡಿಸುತ್ತಾಳೆ. ಇದು ತಪ್ಪಿನ ಅರಿವು, ಪಶ್ಚಾತ್ತಾಪ ಮತ್ತು ಕ್ಷಮಾ ಗುಣಗಳನ್ನು ಕಲಿಸಿ ಕೊಡುತ್ತದೆ. ಗುರುಗಳು ಮನೆಯಲ್ಲಿ ಮಾಡುವ ಪಠ್ಯ ಕ್ರಮದ ಅಭ್ಯಾಸ ಮಾಡದೇ 'ಒಂದು ದಿನ ಬಿಟ್ಟರೆ ಏನಾಗುತ್ತದೆ' ಎಂದು ಮಗುವು ಬಿಟ್ಟಾಗ, ತಾಯಿಯಾದವಳು ಅದನ್ನು ಗುರುತಿಸಿ ಬೆದರಿಸಿ ಅಂದಿನ ಅಭ್ಯಾಸವನ್ನು ಅಂದೇ ಮಾಡಲು ತಿಳಿಸುತ್ತಾಳೆ. ಅಂದರೆ ಜೀವನದಲ್ಲಿ ನಿತ್ಯ ಕರ್ಮಗಳನ್ನು ತಪ್ಪದಂತೆ ಮಾಡಿಕೊಂಡು ಹೋಗಬೇಕೆನ್ನುವ ಧ್ಯೋತಕವಿದು.

ಹೀಗೆ ಕಾಳಜಿಯ ಹರಕೆ, ಮನವನರಿತು ಮಾಡುವ ಕೆಲಸ, ಸೋಲಿಗೆದರದೇ ಮುನ್ನಡೆವ ಪ್ರೋತ್ಸಾಹ, ಸಂಬಂಧಗಳ ಸಂವರಕ್ಷಣೆ, ದೈವೀ ಮನೋಭಾವನೆ,

ಸಹನೆ-ತಾಳ್ಮೆ ಗುಣಗಳ ಅಳವಡಿಕೆ, ಆಹಾರ- ಆರೋಗ್ಯ ಕಡೆ ಗಮನ, ಪಶ್ಚಾತ್ತಾಪದಿಂದ ತಪ್ಪೊಪ್ಪಿಕೊಳ್ಳುವ ಅರಿವು, ಮತ್ತು ತಿದ್ದಿಕೊಳ್ಳುವಿಕೆ, ಕ್ಷಮಾಗುಣ ಅಲ್ಲದೇ ಆಲಸಿಯಾಗದೇ

ನಿತ್ಯ ಕರ್ತವ್ಯದಲ್ಲಿ ತೊಡಗುವುದು ಮುಂತಾದ ಗುಣಗಳನ್ನು ತಾಯಿ ಮುಗುವಿನ ಮನದಲ್ಲಿ ಮೂಡಿಸುತ್ತಾಳೆ. ಕೇವಲ ಮಗುವಿನ ಬಾಲ್ಯ ಯವ್ವನ ಅಲ್ಲದೇ ತನ್ನ ಜೀವನದುದ್ದಕ್ಕೂ ತನ್ನ ಹಿತವಚನ, ಅನುವದ ಧಾರೆ ಎರೆಯುತ್ತಾಳೆ. ಪ್ರತ್ಯಕ್ಷ ಗುರು-ದೇವರಾದ ತಾಯಿ ಹೇಳಿ ಕೊಡುವ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಇದಕ್ಕಿಂತ ಉತ್ತಮ ಸಂಸ್ಕಾರಧಾರೆಯ ಪಾಠಶಾಲೆ ಇನ್ನೊಂದಿಲ್ಲ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹೆಣ್ಣಲ್ಲವೇ?

ಕಂದಮ್ಮ ಕಣ್ಬಿಟ್ಟು
ನೋಡುವ ಮೊದಲ
ದೇವರು ಅಮ್ಮ ಅಲ್ಲವೇ?

ಅಪ್ಪಿ ಜೋಗುಳವಾಡಿ
ಮುತ್ತಿಕ್ಕಿ ನಗಿಸುವಳು
ಅಜ್ಜಿ ಅಲ್ಲವೇ?

ಹೆಗಲ ಮೇಲೆ ಹೊತ್ತು
ಕೊಂಡು ಆಟ ಆಡಿಸಿದವಳು
ಅಕ್ಕ ಅಲ್ಲವೇ?

ಸರಿ ತಪ್ಪುಗಳನ್ನು ಒಟ್ಟಿಗೆ
ಮಾಡಿ ತಪ್ಪನನ್ನದೆಂದವಳು
ತಂಗಿ ಅಲ್ಲವೇ?

ಸಂಸಾರ ಬೆಳೆಸಿ ಸುಖ
ದುಃಖವನ್ನುಂಡವಳು
ಹೆಂಡತಿ ಅಲ್ಲವೇ?

ತಾನು ಎಲ್ಲೇ ಇದ್ದರೂ
ತವರ ಖುಷಿ ನೋಡುವವಳು
ನಾದಿನಿ ಅಲ್ಲವೇ?

ಕುಟುಂಬದ ಒಗ್ಗಟ್ಟ
ಒಡೆಯದೆ ಕಾಪಾಡುವವಳು
ಅತ್ತಿಗೆ ಅಲ್ಲವೇ?

ಅಪ್ಪನ ಮೀಸೆಯ ತಿರುಗಿಸಿ
ನಗುವ ಪುಟ್ಟ ಕಂದಮ್ಮ
ಮಗಳಲ್ಲವೇ?

ಸೃಷ್ಟಿಯೇ ಅವಳಾದ ಮೇಲೆ
ಪ್ರತಿದಿನವೂ ಪೂಜಿಸಿ
ನಲಿಯ ಬೇಕಲ್ಲವೇ?

- GRB

### ಕೆಲಸ

ನ್ಯಾಯ ನೀತಿಯಿಂದ ಮಾಡಿದರೆ ಕೆಲಸ
ಜನರ ಮನದಲಿ ನೆಲೆಯೂರುವರು
ಅನುದಿವಸ
ಜನಾನುರಾಗಿಯಾಗಿ ಮಾಡಿದ ಕಾರ್ಯ
ತುಂಬುವುದು ಜನಮನಕ್ಕೆ ಸ್ಥೈರ್ಯ

ಕಾಯಕವೇ ಕೈಲಾಸ ಎಂದು ತಿಳಿದಿರು
ಮೈ ಮುರಿದು ದುಡಿಯಲು ಮರೆಯದಿರು
ಕೆಲಸ ಮಾಡಲು ನೆಪವ ಹುಡುಕದಿರು
ಕೈ ಕೆಸರಾದರೆ ಆಗುವುದು ಬಾಯಿ ಮೊಸರು

ನಾವು ಮಾಡುವ ಕೆಲಸ
ಸೆಳೆಯಬೇಕು ಇತರರ ಮನಸ
ಪ್ರತಿಯಾಗಿ ದೊರೆಯುವುದು ಉಲ್ಲಾಸ
ಅನುದಿನವೂ ಇರುವುದು ಸಂತಸ

–ಚೇತನ ಭಾರ್ಗವ ಬೆಂಗಳೂರು

## ಹಂಡೆಸಿರಿ ರಾಷ್ಟ್ರೀಯ ಪ್ರಶಸ್ತಿಗೆ ಡಾ.ಕೆ.ರವೀಂದ್ರನಾಥ ಭಾಜನ

ಹಂಪಿ ಟೈಮ್ಸ್ ಹೊಸಪೇಟೆ



ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಮತ್ತು ನಾಡಿನ ಹಸ್ತಪ್ರತಿ ಕ್ಷೇತ್ರದ ಹಿರಿಯ ಸಂಶೋಧಕ ಡಾ. ಕೆ. ರವೀಂದ್ರನಾಥ ಅವರಿಗೆ ಕಲಬುರ್ಗಿಯ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ 2025ನೇ ಸಾಲಿನ "ಹಂಡೆಸಿರಿ" ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದರೆ.

ಡಾ. ಕೆ. ರವೀಂದ್ರನಾಥ ಅವರು ಹಸ್ತಪ್ರತಿಯ ಗ್ರಂಥ ಸಂಪಾದನೆ, ಚರಿತ್ರೆ–ದಾಖಲು ಸಾಹಿತ್ಯ, ವಚನ ಸಾಹಿತ್ಯ ಹಸ್ತಪ್ರತಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 70ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಡಾ. ಕೆ. ರವೀಂದ್ರನಾಥ ಅವರ ಸೇವೆಯನ್ನು ಗುರುತಿಸಿ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠವು 2025ನೇ ಸಾಲಿನ "ಹಂಡೆಸಿರಿ" ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆಂದು ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠದ ನಿರ್ದೇಶಕರಾದ ಪ್ರೊ. ಎಸ್. ಸಿ. ಪಾಟೀಲ್ ಅವರು ತಿಳಿಸಿದ್ದಾರೆ.

ಈ ಪ್ರಶಸ್ತಿವು ಫಲಕದೊಂದಿಗೆ ಸೇರಿದಂತೆ 25 ಸಾವಿರ ನಗದು ಒಳಗೊಂಡಿದೆ. ಕೂಡಲಸಂಗಮದಲ್ಲಿ ಫೆ. 1 ಮತ್ತು 2 ಫೆಬ್ರವರಿಯಲ್ಲಿ ನಡೆಯುವ ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠದ 3ನೆಯ ಸಮಾವೇಶದಲ್ಲಿ ಹಂಡೆಸಿರಿ ರಾಷ್ಟ್ರೀಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ತಿಳಿಸಿದ್ದಾರೆ.

**ವಿದ್ಯಾರ್ಥಿಗಳೇ, ಶೈಕ್ಷಣಿಕ ಪ್ರಗತಿಗಾಗಿ ಜಿಲ್ಲಾಮಟ್ಟದ ಪೂರ್ವಸಿದ್ಧತಾ ಪರೀಕ್ಷೆಯ ಮಾದರಿ ಪ್ರಶ್ನೆ ಪತ್ರಿಕೆಗಳನ್ನ ಬಿಡಿಸಿ, ನಿಮ್ಮ ಶಿಕ್ಷಕರಿಗೆ ತೋರಿಸಿ**

### ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ರವೀಂದ್ರನಾಥ್ ಹೇಳಿಕೆ

# ಹೆಣ್ಣು ಮಗು ರಕ್ಷಣೆ ಎಲ್ಲರ ಹೊಣೆ

ಹಂಪಿ ಟೈಮ್ಸ್ ಕೊಪ್ಪಳ



ಹೆಣ್ಣು ಮಗುವನ್ನು ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ರವೀಂದ್ರನಾಥ್ ಎಂ.ಹೆಚ್ ಹೇಳಿದರು.


ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಬೋಧಕ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ಎಂ.ಸಿ.ಹೆಚ್ ಆಸ್ಪತ್ರೆಯ ಬಾಣಂತಿಯರ ವಾರ್ಡಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ "ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ" ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿ ವರ್ಷ ಜನವರಿ 24 ರಂದು "ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮ"ವನ್ನು ಆಚರಿಸಲಾಗುತ್ತದೆ. ಈ ಕಾರ್ಯಕ್ರಮದ ಉದ್ದೇಶ ಹೆಣ್ಣು ಮಗುವಿನ ಮಹತ್ವದ ಬಗ್ಗೆ, ಹೆಣ್ಣು ಮಕ್ಕಳ ಸಮಾನತೆ ಮತ್ತು ಮಕ್ಕಳ ರಕ್ಷಣೆ ಕುರಿತು, ಸಮಾಜದಲ್ಲಿ ಅರಿವು ಮೂಡಿಸುವುದಾಗಿದೆ. ಈ ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಇನ್ನೂ ಸರಿಯಾದ ಸ್ಥಾನ–ಮಾನ ನೀಡಿರುವುದಿಲ್ಲ. ಕುಟುಂಬದಲ್ಲಿ ಹೆಣ್ಣು ಮಗುವನ್ನು ನೋಡುವ ದೃಷ್ಟಿಕೋನ ಬೇರೆಯಾಗಿದೆ. ಆದರೆ ಹೆಣ್ಣು ಮಕ್ಕಳ ರಕ್ಷಣೆಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಹೆಣ್ಣು ಕುಟುಂಬದ ಕಣ್ಣು, ಸಮಾಜದ ಆಸ್ತಿ, ಮನೆ ಬೆಳಗುವ ನಂದಾದೀಪವಿದ್ದಂತೆ, ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು, ಎಂಬುದನ್ನು ಅರಿಯಬೇಕು. ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವವಳು ಹೆಣ್ಣು, ವಯಸ್ಸಾದವರ ಆರೈಕೆ ಮಾಡುವವಳೂ ಹೆಣ್ಣು, ಪ್ರತಿಯೊಂದು ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುವವಳು ಹೆಣ್ಣು. ಆದ್ದರಿಂದ ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ ಮನೋಭಾವನೆ ಮಾಡದೆ ಪ್ರೀತಿಯಿಂದ ಕಾಣಬೇಕು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಒಂದು ಮಗುವಿನಿಂದ ಇನ್ನೊಂದು ಮಗುವಿಗೆ, ಕನಿಷ್ಠ 4 ವರ್ಷ ಅಂತರ ಕಾಪಾಡಲು ಕುಟುಂಬ ಕಲ್ಯಾಣ ಕಾರ್ಯಕ್ರಮದ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆಶಾ ಕಾರ್ಯಕರ್ತೆಯರನ್ನು ಸಂಪರ್ಕಿಸಬೇಕು ಎಂದು ತಿಳಿಸಿದರು.

ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧವಾಗಿದೆ. ಒಂದು ವೇಳೆ ಲಿಂಗ ಪತ್ತೆ ಮಾಡಿ, ಗರ್ಭಪಾತ ಮಾಡಿಸಿದರೆ 10 ಸಾವಿರ ರೂಗಳಿಂದ 1 ಲಕ್ಷ ರೂಗಳವರೆಗೆ ಹಾಗೂ 3 ರಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದರು.

ಕೊಪ್ಪಳ ಎಂ.ಸಿ.ಹೆಚ್ ಆಸ್ಪತ್ರೆಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರಾದ ಡಾ. ಸುರೇಖಾ ಅವರು ಕಾರ್ಯಕ್ರಮ ಕುರಿತು ಮಾತನಾಡಿ, ಹೆಣ್ಣು ಮಕ್ಕಳ ಎಲ್ಲಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೆಣ್ಣು ಮಕ್ಕಳ ಬಗ್ಗೆ ನಿರ್ಲಕ್ಷ್ಯತನ ಬೇಡ, ಹೆಣ್ಣು–ಗಂಡು ಬೇದ–ಬಾವ ಮಾಡದೇ ಸಮಾನವಾಗಿ ಕಾಣಬೇಕು ಮತ್ತು ಸಮಾನವಾಗಿ ಶಿಕ್ಷಣ ಕೊಡಿಸಬೇಕು ಎಂದು ವಿವರವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸ್ತ್ರೀರೋಗ ತಜ್ಞರಾದ ಡಾ ರಾಜೇಶ್, ಮಕ್ಕಳ ತಜ್ಞರಾದ ಡಾ. ಭಾರ್ಗವ, ಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ ಗೀರಿಶ್, ಶುಶ್ರೂಷಕ ಅಧೀಕ್ಷಕರಾದ ತೈರುನ್ನಿಸಾ ಸೈಯದ್, ಎಂ.ಸಿ.ಹೆಚ್ ಆಸ್ಪತ್ರೆಯ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಬಾಣಂತಿಯರು, ತಾಯಂದಿರು ಹಾಗೂ ಇತರರು ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ಪ್ಹಿ.ಪಿ ಅವರು ಕಾರ್ಯಕ್ರವನ್ನು ನಿರೂಪಿಸಿದರು. ಸ್ವಾತಿ ಅವರ ಪ್ರಾರ್ಥನೆ ಗೀತೆಯನ್ನು ಹಾಡಿದರು. ಕಾರ್ಯಕ್ರಮದ ಅಂಗವಾಗಿ ಆಸ್ಪತ್ರೆಯಲ್ಲಿರುವ ಎಲ್ಲಾ ಬಾಣಂತಿಯರಿಗೆ ಹಣ್ಣು ಹಂಪಲುಗಳನ್ನು ವಿತರಣೆ ಮಾಡಲಾಯಿತು.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 28–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1618.09 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11099 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 56.132 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.55 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 354 ಕ್ಯುಸೆಕ್ |
| ಸಾಮರ್ಥ್ಯ | 9.864 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

29–01–2025 – ಬುಧವಾರ

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಢ |
| ಯೋಗ | : ಸಿದ್ಧಿ |
| ಕರಣ | : ನಾಗವ |
| ಸೂರ್ಯೋದಯ | : 07:09:11 |
| ಸೂರ್ಯಾಸ್ತ | : 18:11:13 |
| ರಾಹು ಕಾಲ | : 12:40–14:03 |
| ಯಮಘಂಡ ಕಾಲ | : 08:32–09:55 |
| ಗುಳಿಕ ಕಾಲ | : 11:17–12:40 |

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

ಹಂಪಿ ಉತ್ತವ ಕೊಪ್ಪಳ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

10 ದಿನಗಳ ಹೈನುಗಾರಿಕೆ ಮತ್ತು ಎರಹುಳು ಗೊಬ್ಬರ ತಯಾರಿಕೆ ತರಬೇತಿ ಹಾಗೂ 30 ದಿನಗಳ ಮೊಬೈಲ್ ರಿಪೇರಿ ಮತ್ತು ಸರ್ವಿಸ್ ತರಬೇತಿಗಾಗಿ ಫೆಬ್ರವರಿ 3 ರಂದು ಸಂದರ್ಶನ ನಡೆಯಲಿದ್ದು, ಫೆ. 5 ರಿಂದ ತರಬೇತಿಗಳು ಪ್ರಾರಂಭವಾಗಲಿವೆ. ಅರ್ಜಿ ಸಲ್ಲಿಸಲು ಅರ್ಜಿದಾರರು 18 ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಪಾಸ್ ಆಗಿರಬೇಕು. ಕೊಪ್ಪಳ ಜಿಲ್ಲೆಯ ಗ್ರಾಮೀಣ ಭಾಗದವರಾಗಿ ರಬೇಕು. ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲಿಚ್ಛಿಸುವ ಆಸಕ್ತರು ತಮ್ಮ ಆಧಾರ ಕಾರ್ಡ ಜೆರಾಕ್ಸ್ ಪ್ರತಿ, ರೇಶನ್ ಕಾರ್ಡ ಜೆರಾಕ್ಸ್ ಪ್ರತಿ, ಪಾಸ್‌ಪೋರ್ಟ್ ಸೈಜ್ ಮೂರು ಫೋಟೋ, ಮಾರ್ಕ್ಸಕಾರ್ಡ ಜೆರಾಕ್ಸ್ ಪ್ರತಿಯೊಂದಿಗೆ ಅರ್ಜಿಯನ್ನು ನಿರ್ದೇಶಕರು, ಸ್ಟೇಟ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ದೂ.ಸಂ: 08539–231038 ಮೊ.ಸಂ: 9483618178, 7259073827, 9538096796 & 9481085217 ಗೆ ಸಂಪರ್ಕಿಸಬಹುದಾಗಿದೆ. ಸ್ವಯಂ ಉದ್ಯೋಗ ತರಬೇತಿ ಗಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಕೊಪ್ಪಳ ಎಸ್‌ಬಿಐ ಆರ್‌ಸಿಟಿ ನಿರ್ದೇಶಕರು ತಿಳಿಸಿದ್ದಾರೆ.


# ಪ್ರೌಢ ಶಾಲೆ : ಶಿಕ್ಷಕರ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿ ಪ್ರಕಟ

ಹಂಪಿ ಟೈಮ್ಸ್ ಕೊಪ್ಪಳ

ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್–2 ಮತ್ತು ತತ್ಸಮಾನ ವೃಂದದ ಶಿಕ್ಷಕರ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಕಲಬುರಗಿ ಆಯುಕ್ತಾಲಯದ 7 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್–2 ಮತ್ತು ತತ್ಸಮಾನ ವೃಂದದ ಶಿಕ್ಷಕರ ಪ್ರಾರಂಭದ ಮೂಲ ವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕಕರಡುಜೇಷ್ಠತಾಪಟ್ಟಿಯನ್ನುವೆಬ್‌ಸೈಟ್‌ಣಣಠಿ://ಛಿಳಿಇಚಿಟಚಿಛಣಡಿಣ. ಇಚಿಡಿಟಿಚಿಣಚಿಇಚಿ.ರಠತ.ಎಟ ನಲ್ಲಿ ಪ್ರಕಟಿಸಲಾಗಿದ್ದು, 1–1–2025 ರಲ್ಲಿದ್ದಂತೆ ಕಲಬುರಗಿ ವಿಭಾಗ ವ್ಯಾಪ್ತಿಯ ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರು ಗ್ರೇಡ್–2 ಮತ್ತು ತತ್ಸಮಾನ ವೃಂದದ ಶಿಕ್ಷಕರು ಪ್ರಕಟಿತ ತಾತ್ಕಾಲಿಕ ಕರಡು ಜೇಷ್ಠ ಪಟ್ಟಿಯಲ್ಲಿ ಶಿಕ್ಷಕರ ಸೇವಾ ವಿವರದ ಮಾಹಿತಿ (ಹೆಚ್‌ಆರ್.ಎಂ.ಎಸ್/ ಇಇಡಿಎಸ್ ತಂತ್ರಾಂಶದಲ್ಲಿರುವಂತೆ ಹಾಗೂ ಮೂಲ ಸೇವಾ ಪುಸ್ತಕದಲ್ಲಿರುವಂತೆ) ಶಿಕ್ಷಕರ ಹೆಸರು, ಜನ್ಮ ದಿನಾಂಕ, ಪ್ರೌಢ ಶಾಲಾ ಶಿಕ್ಷಕರ ಹುದ್ದೆಗೆ ಹಾಜರಾದ, ಸೇವೆಗೆ ಸೇರಿದ ದಿನಾಂಕ, ವಿಭಾಗಕ್ಕೆ ಬಂದ ದಿನಾಂಕ, ಬೋಧನಾ ವಿಷಯ. ವಿದ್ಯಾರ್ಹತೆ, ವಿಷಯ, ಸ್ನಾತಕೊತ್ತರ ಪದವಿ, ಮೆರಿಟ್ ಮಾಹಿತಿ, ಇತರೆ ಯಾವುದೇ ತರಹದ ದೋಷಗಳು ಕಂಡು ಬಂದಲ್ಲಿ ಸಂಬಂಧಿಸಿದ ಶಿಕ್ಷಕರು ಸೂಕ್ತ ದೃಢೀಕೃತ ದಾಖಲೆಗಳೊಂದಿಗೆ ದೋಷಗಳನ್ನು ಸರಿಪಡಿಸಲು ನಮೂನೆ 1 ಮತ್ತು ಹೊಸದಾಗಿ ಸೇರ್ಪಡೆ ಮಾಡಲು ನಮೂನೆ–2 ಅನ್ನು ನಿಗದಿತ ನಮೂನೆಗಳಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಹಾಗೂ ಉಪನಿರ್ದೇಶಕರ ಕಛೇರಿಗಳಲ್ಲಿ ಫೆಬ್ರವರಿ 16 ರೊಳಗೆ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳುವಂತೆ ಕೊಪ್ಪಳ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷ್ಣ ನಾಯ್ಕಗೆ ಡಿಎಲ್‌ಎಂಟಿ ಪ್ರಶಸ್ತಿ



ಹಗರಿಬೊಮ್ಮನಹಳ್ಳಿ ತಾಲೂಕಿನ ಸೊನ್ನ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಕೃಷ್ಣ ನಾಯ್ಕ ಅವರಿಗೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ರಾಷ್ಟ್ರೀಯ ಮತದಾರರ ದಿನಾಚರಣೆ–2025 ದಂದು ಜಿಲ್ಲಾ ಮಟ್ಟದ ಉತ್ತಮ ಮಾಸ್ಟರ್ ತರಬೇತುದಾರ(ಡಿಎಲ್‌ಎಂಟಿ)ರೆಂದು ಪ್ರಮಾಣ ಪತ್ರ ನೀಡಿದರು. ನ್ಯಾಯಾಧೀಶರು, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು, ಜಿಪಂ ಸಿಇಒ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ್ ಶಾ ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 51 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಮಾದರಿ ಪ್ರಶ್ನೆ ಪತ್ರಿಕೆ 2

ಅಂಕಗಳು : 40 ಸಮಯ : 90ನಿಮಿಷ

**I ಸರಿಯಾದ ಉತ್ತರವನ್ನು ಬರೆಯಿರಿ : 8 X 1 = 8**

1) 13 ಮತ್ತು 52 ರ ಮ.ಸಾ.ಅ. ಕಂಡುಹಿಡಿಯಿರಿ

2) X,20,14 .. ಸಮಾಂತರ ಶ್ರೇಢಿಯಲ್ಲಿದ್ದರೆ X ನ ಬೆಲೆ

3) ಗೋಳದ ಘನಫಲವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ.

4) ಒಂದು ಘಟನೆಯ 'E' ಗೆ P(E)=0.7 ಆದರೆ $P(\bar{E})$ ಯ ಬೆಲೆಯನ್ನು ಕಂಡುಹಿಡಿಯಿರಿ.

5) $2x^2 = x - 7$ ಇದರ ಆದರ್ಶ ರೂಪ

6) ಕೋ, ಕೋ.ಕೋ. ನಿರ್ಧಾರಕ ಗುಣವನ್ನು ನಿರೂಪಿಸಿ.

7) x ಅಕ್ಷದಿಂದ (-5 , 8) ಬಿಂದುವಿಗೆ ಇರುವ ದೂರ

8) $\sin 30^0 + \tan 45^0$ ಯ ಬೆಲೆ

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: 6 X 2 = 12**

9) 12, 15 & 21 ರ ಮ.ಸಾ.ಅ ಮತ್ತು ಲ.ಸಾ.ಅ ವನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ

10) 7, 15, 23 ..ಈ ಸಮಾಂತರ ಶ್ರೇಢಿಯ 16 ಪದಗಳವರೆಗಿನ ಮೊತ್ತವನ್ನು ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ.

11) $p(x) = x^2 + 7x + 12 = 0$ ಈ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

12) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸಿರಿ. $5x + y = 12$ ಮತ್ತು $x - y = 6$

13) (6,4) ಮತ್ತು (5,-3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 3 : 2 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

14) 13 ಸೆಂ.ಮೀ ಓರೆ ಎತ್ತರ ಮತ್ತು 5 ಸೆಂ.ಮೀ ತ್ರಿಜ್ಯವನ್ನು ಹೊಂದಿರುವ ಶಂಕುವಿನ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡುಹಿಡಿಯಿರಿ.

**III ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: 4 X 3 = 12**

15) ಈ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯಿರಿ

| ವರ್ಗಾಂತರ | 0-5 | 5-10 | 10-15 | 15-20 | 20-25 |
|---|---|---|---|---|---|
| ಆವೃತ್ತಿ | 5 | 6 | 9 | 5 | 4 |

16) $P(x) = x^2 + 11x + 30$ ಈ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

17) "ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ" ಎಂದು ಸಾಧಿಸಿ.

18) ಮೊದಲು 50 ಸ್ವಾಭಾವಿಕ ಸಂಖ್ಯೆಗಳಲ್ಲಿ ಯಾದೃಚ್ಛಿಕವಾಗಿ ತೆಗೆದರೆ (1)7 ರ ಗುಣಕವಾಗಿರುವ (2)ಅವಿಭಾಜ್ಯ ಸಂಖ್ಯೆಯಾಗಿರುವ ಸಂಭವನೀಯತೆ ಎಷ್ಟು?

**IV ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 X 4 = 8**

19) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಗೆ ನಕ್ಷೆಯ ವಿಧಾನದಿಂದ ಪರಿಹಾರ ಕಂಡುಹಿಡಿಯಿರಿ.

$3x + y = 8$ , $x - y = 2$

20) "Δದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ."ಎಂದು ಸಾಧಿಸಿ.

www.hampitimes.com - Hampi Times Margadarshi

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಚಿಲುಗೋಡು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

epaper.hampitimes.com
www.hampitimes.com
HAMPI TIMES VIJAYANAGARA
ಹಂಪಿ ಟೈಮ್ಸ್
HAMPI TIMES
ಬುಧವಾರ/Wednesday 29.01.2025
ವಿಜಯನಗರ


ಮೈಕ್ರೋ ನ್ಯೂಸ್

## ಫೆ.01 ರಂದು ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮ

ಹಂಪಿ ಟೈಮ್ಸ್ ಬಳ್ಳಾರಿ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಮಡಿವಾಳ ಮಾಚಿದೇವ ಜಯಂತಿ ಕಾರ್ಯಕ್ರಮವನ್ನು ಫೆ.01 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

## ಫೆ.04 ರಂದು ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ

ಹಂಪಿ ಟೈಮ್ಸ್ ಬಳ್ಳಾರಿ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲಿ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಫೆ.04 ರಂದು ಮಧ್ಯಾಹ್ನ 12 ಗಂಟೆಗೆ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

## ಜ.31 ರಂದು ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ಜಾತ್ರೆಯ ಕುರಿತು ಪೂರ್ವಭಾವಿ ಸಭೆ

ಹಂಪಿ ಟೈಮ್ಸ್ ಬಳ್ಳಾರಿ
ನಗರದ ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ಮತ್ತು ಶಿವರಾತ್ರಿ ಉತ್ಸವವು ಫೆ.06 ರಿಂದ 26 ರ ವರೆಗೆ ಜರುಗಲಿದ್ದು, ಇದರ ಅಂಗವಾಗಿ ಜ.31 ರಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತೆ ಸಭೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

Greetings
You can also say
Ads Starts
from Rs.1000
94486 33038

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

# ಮಕ್ಕಳಿಗೆ ಲಿಂಗಪೂಜಾ ಸಂಸ್ಕಾರ ನೀಡಿ

### ಗಿಣಿವಾರದ ಶಿವಾಚಾರ್ಯಸ್ವಾಮಿ ಹೇಳಿಕೆ । ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳ ಪುಣ್ಯಸ್ಮರಣೆ



ಹಂಪಿ ಟೈಮ್ಸ್ ಕಂಪ್ಲಿ
ಪಂಚಪೀಠಗಳ ರಕ್ಷಣೆಯಲ್ಲಿ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದಂಗಳವರ ಪಾತ್ರ ಮಹತ್ವದ್ದಾಗಿದೆ ಎಂದು ಗಿಣಿವಾರದ ಶಿವಾಚಾರ್ಯಸ್ವಾಮಿ ಹೇಳಿದರು.

ಇಲ್ಲಿನ ಗುರುಮಠದಲ್ಲಿ ಲಿಂ.ಓದ್ರೋ ಕರಿಬಸಯ್ಯನವರ ಶಿವಾನಂದಾಶ್ರಮದಿಂದ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದಂಗಳವರ 89ನೇ ಪುಣ್ಯಸ್ಮರಣೆ, ಲಿಂ.ಗೊಗ್ಗಬಸಯ್ಯನವರ 41ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಸಾಧು ಸಂತರಲ್ಲಿ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರು ಆದರ್ಶರಾಗಿ ನಿಲ್ಲುವಲ್ಲಿ ಮುಂಚೂಣಿಯಲ್ಲಿದ್ದಾರೆ. ಪರಿಪೂರ್ಣ ಬದುಕಿಗೆ ದಾನ, ಧ್ಯಾನ, ಜ್ಞಾನ ಮುಖ್ಯ ಎಂದು ಸಾರಿದ್ದಾರೆ. ತಂದೆತಾಯಿಗಳು ಮಕ್ಕಳಿಗೆ ಲಿಂಗಪೂಜಾ ಸಂಸ್ಕಾರರನ್ನಾಗಿಸುವಲ್ಲಿ ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಾಂಗತ್ರಯ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಚಾರ್ಯ ಎಂ.ಎಸ್.ಶಶಿಧರಶಾಸ್ತ್ರಿಗಳು ಅಧ್ಯಕ್ಷತೆವಹಿಸಿ ಮಾತನಾಡಿ, ಗೊಗ್ಗ ಬಸಯ್ಯನವರ ಧರ್ಮಾಚರಣೆ, ಸಮಯ ಪರಿಪಾಲನೆ, ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ರೂಢಿಸಿಕೊಂಡಿದ್ದು ಇಂದಿನ ಜನತೆಗೆ ಮಾದರಿಯಾಗಿದ್ದಾರೆ. ಪಟ್ಟಣದ ಸಾಹಿತ್ಯ, ಸಂಗೀತ, ಪುರಾಣ, ಸಂಸ್ಕೃತ, ವೈದಿಕ ಮತ್ತು ಸಾಂಸ್ಕೃತಿ ಪರಂಪರೆ ಪೋಷಿಸುವಲ್ಲಿ ಗೊಗ್ಗ ಮನೆತನ ಮಹತ್ವದಸ್ಥಾನ ಹೊಂದಿದೆ ಎಂದರು.

ಉಜ್ಜಯಿನಿ ಸಿದ್ಧಲಿಂಗ ಜಗದ್ಗುರುಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಪ್ರಮುಖರಾದ ಅಯೋಧ್ಯೆ ಎಚ್.ಎಂ.ಶರಣಬಸವರಾಜಸ್ವಾಮಿ, ಅರವಿ ಬಸವನಗೌಡ, ಗೊಗ್ಗ ಚನ್ನಬಸವರಾಜ, ಗೊಗ್ಗ ಗುರುಸಿದ್ಧಯ್ಯ, ಘನಮಠದಯ್ಯ ಹಿರೇಮಠ, ಗೊಗ್ಗ ಕಾರ್ತೀಕ್, ಗೊಗ್ಗ ಸಿದ್ಧಲಿಂಗಸ್ವಾಮಿ, ಶೋಭಾ, ಸುಪ್ರಿಯಾ, ಜಿ.ಪ್ರಕಾಶ್, ಬಸವಕುಮಾರ್, ಎಸ್.ಡಿ.ಬಸವರಾಜ, ಎಸ್. ಬಂಡೆಯ್ಯ ಸ್ವಾಮಿ, ಎಚ್.ನಾಗರಾಜ, ಅಕ್ಕಮಹಾ ದೇವಿ ಮಹಿಳಾ ಮಂಡಳಿಯವರು ಇದ್ದರು.

# ರಸ್ತೆ ನಿಯಮಗಳನ್ನು ಪಾಲಿಸಿ ಜೀವ ಉಳಿಸಿ

### ವಿಜಯನಗರ ಜಿಲ್ಲಾ ಪೊಲೀಸರಿಂದ ಮಂಗಳವಾರ ರಸ್ತೆ ಸುರಕ್ಷತೆ ಸಪ್ತಾಹ




ಹಂಪಿ ಟೈಮ್ಸ್ ಹೊಸಪೇಟೆ
ವಾಹನ ಸವಾರರು ವಾಹನಗಳನ್ನು ಚಲಾಯಿಸುವಾಗ ರಸ್ತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿರ್ಲಕ್ಷಿಸಿದರೆ ಜೀವಕ್ಕೆ ಅಪಾಯ ಎದುರಾಗುತ್ತದೆ ಎಂದು ವಿಜಯನಗರ ಎಎಸ್ಪಿ ಸಲೀಂಪಾಷಾ ಹೇಳಿದರು.

ನಗರದಲ್ಲಿ ವಿಜಯನಗರ ಜಿಲ್ಲಾ ಪೊಲೀಸರಿಂದ ಮಂಗಳವಾರ ರಸ್ತೆ ಸುರಕ್ಷತೆ ಸಪ್ತಾಹ ಆಚರಣೆಗೆ ಹಸಿರು ನಿಶಾನೆ ನೀಡೋ ಮೂಲಕ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ನಾನಾ ಶಾಲೆಗಳ ಸಾವಿರಾರು ಮಕ್ಕಳು ಜಾಥಾದಲ್ಲಿ ಭಾಗಿಯಾಗಿದ್ರು. ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯಿಂದ ರಾಮಾ ಸರ್ಕಲ್, ಅಂಬೇಡ್ಕರ್ ಸರ್ಕಲ್, ಅಪ್ಪು ಸರ್ಕಲ್ ಮೂಲಕ ಮೆರವಣಿಗೆ ನಡೆಸಲಾಯಿತು. ಡಿವೈಎಸ್ಪಿ ಮಂಜುನಾಥ್ ತಳವಾರ್, ಬಿಇಓ ಚನ್ನಬಸಪ್ಪ, ಸಿಪಿಐಗಳಾದ ಹುಲುಗಪ್ಪ, ಲಖನ್ ಮಸುಗುಪ್ಪಿ ಇದ್ದರು

### ಹಂಪಿ ಕನ್ನಡ ವಿವಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಗ್ಯಾರಂಟಿ ಯೋಜನೆಗಳ ಮುಕ್ತ ಸಂವಾದ

# ಕುಟುಂಬಕ್ಕೆ 6–8 ಸಾವಿರ ರೂ ಉಳಿತಾಯ ಗ್ಯಾರಂಟಿ

ಹಂಪಿ ಟೈಮ್ಸ್ ಹೊಸಪೇಟೆ
ಗ್ಯಾರಂಟಿ ಯೋಜನೆಗಳಿಂದ ಲಕ್ಷಾಂತರ ಕುಟುಂಬಗಳಿಗೆ ಆರ್ಥಿಕ ಸಮಸ್ಯೆಯನ್ನು ಎದುರಿಸುವ ಶಕ್ತಿ ನೀಡಿದೆ. ಬಡ ವಿದ್ಯಾರ್ಥಿಗಳಿಗೆ, ನಿರುದ್ಯೋಗ ಯುವಜನತೆ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಾದ ಉಪಾಧ್ಯಕ್ಷ ಎಸ್.ಎಸ್ ಮೆಹರೋಜ್ ಖಾನ್ ತಿಳಿಸಿದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿಗಳೊಂದಿಗೆ "ಪಂಚ ಗ್ಯಾರಂಟಿ ಯೋಜನೆಗಳ" ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಕರ್ನಾಟಕ ದಲ್ಲಿ 'ಯುವ ನಿಧಿ' ಯೋಜನೆಯು ರಾಜ್ಯದ ಯುವಜನರಿಗೆ ಆರ್ಥಿಕ ಭದ್ರತೆಯನ್ನು ಒದಗಿಸು ತ್ತದೆ. ವಿದ್ಯಾವಂತ ನಿರುದ್ಯೋಗಿ ಯುವಕರು ತಮ್ಮ ಕುಟುಂಬವನ್ನು ಪೋಷಿಸಲು ಮಾಸಿಕ ಆರ್ಥಿಕ ಸಹಾಯವನ್ನು ಪಡೆಯುತ್ತಾರೆ. ಈ ಯೋಜನೆಯು ವಿದ್ಯಾವಂತ ಯುವಕರಿಗೆ ನಿರುದ್ಯೋಗ ಪ್ರಯೋಜನಗಳನ್ನು ನೀಡುವ ಗುರಿಯನ್ನು ಹೊಂದಿದೆ ಆದ್ದರಿಂದ ಅವರು ತಮ್ಮ ಹಣಕಾಸಿನ ಅಗತ್ಯಗಳಿಗಾಗಿ ಯಾರನ್ನೂ ಅವಲಂಬಿಸುವುದಿಲ್ಲ.

ಅರ್ಹ ಫಲಾನುಭವಿಗಳು ನೇರ ಬ್ಯಾಂಕ್ ವರ್ಗಾವಣೆ (DBT) ಮೂಲಕ ನೇರವಾಗಿ ತಮ್ಮ ಬ್ಯಾಂಕ್ ಖಾತೆಗಳಲ್ಲಿ ಮಾಸಿಕ ಸಹಾಯವನ್ನು ಪಡೆಯುತ್ತಾರೆ. ಅವರು ಉದ್ಯೋಗವನ್ನು ಕಂಡುಕೊಳ್ಳುವವರೆಗೆ ಅಥವಾ ಎರಡು ವರ್ಷಗಳವರೆಗೆ ಈ ಯೋಜನೆಯಿಂದ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.

'ಗೃಹಲಕ್ಷ್ಮಿ ಯೋಜನೆ' ಯಡಿ ತಾಯಂದಿರು ಪಡೆಯುವ ಹಣವನ್ನು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಬಳಸುತ್ತಿರುವುದು, ಶಾಲಾ–ಕಾಲೇಜುಗಳ ಶುಲ್ಕ ಪಾವತಿಸಿದ್ದಾರೆ, ಲ್ಯಾಪ್ ಟ್ಯಾಪ್ ಕೊಡಿಸಿರುವ ಬಗ್ಗೆ, ಗ್ರಂಥಾಲಯ ಸ್ಥಾಪಿಸಿರುವುದು ಹೀಗೆ ಹತ್ತಾರು ಸಮಸ್ಯೆಗಳಿಗೆ ಗ್ಯಾರಂಟಿ ಯೋಜನೆ ಉಪಯೋಗವಾಗುತ್ತಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳಲ್ಲಿ 'ಶಕ್ತಿ ಯೋಜನೆ' ಕೂಡ ಒಂದು ಪ್ರಮುಖವಾದದ್ದು, ಈ ಯೋಜನೆಯಿಂದ ಲಕ್ಷಾಂತರ ಮಹಿಳೆಯರು, ವಿದ್ಯಾರ್ಥಿಗಳು ಸರ್ಕಾರಿ ಬಸ್ ಗಳಲ್ಲಿ ಉಚಿತ ಬಸ್ ಪ್ರಯಾಣ ಮಾಡುತ್ತಿದ್ದಾರೆ.

ಇನ್ನೂ 'ಗೃಹ ಜ್ಯೋತಿ ಯೋಜನೆ' ಯಡಿ ಪ್ರತಿ ಮನೆಗೆ ಉಚಿತವಾಗಿ 200 ಯೂನಿಟ್ ವಿದ್ಯುತ್ ನೀಡುವ ಮೂಲಕ ನಮ್ಮ ಸರ್ಕಾರ ಬಡವರ ಮನೆಗಳಿಗೆ ಬೆಳಕು ನೀಡುತ್ತಿದೆ ಈ ಮೂಲಕ ಸರ್ಕಾರದ ಯೋಜನೆಗಳು ಜನರಿಗೆ ತಲುಪುತ್ತಿದೆ ಎಂದು ತಿಳಿಸಿದರು.

'ಅನ್ನಭಾಗ್ಯ' ಯೋಜನೆ ಸೇರಿದಂತೆ ಪಂಚ ಯೋಜನೆಗಳಿಂದ ಫಲಾನುಭವಿಗಳ ಪ್ರತಿ ಕುಟುಂಬಕ್ಕೆ ಮಾಸಿಕವಾಗಿ 6 ರಿಂದ 8 ಸಾವಿರ ಉಳಿತಾಯವಾಗುತ್ತಿದೆ. ಕಷ್ಟದ ಸಮಯದಲ್ಲಿ ಜನರು ಈ ಯೋಜನೆಗಳಿಂದ ಅನುಕೂಲ ಪಡೆಯುತ್ತಿದ್ದಾರೆ ಎಂದರು.

ಗ್ಯಾರಂಟಿ ಯೋಜನೆಗಳಿಂದ ಸಮಾಜದಲ್ಲಿ ಆಗಿರುವ ಬದಲಾವಣೆಗಳ ಕುರಿತು, ಹಾಗೂ ಗೃಹಲಕ್ಷ್ಮಿ ಹಣದಿಂದ ಮಹಿಳೆಯರಲ್ಲಿ ಆರ್ಥಿಕ ಸ್ವಾಲಂಬನೆ ಹೆಚ್ಚಾಗಿದ್ದು, ಉದ್ಯೋಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಶೇಕಡಾ 12% ರಷ್ಟು ಹೆಚ್ಚಾಗಿದೆ, ಒಟ್ಟಾರೆಯಾಗಿ ಸ್ತ್ರೀ ಸಶಕ್ತೀಕರಣ ಸಾಧ್ಯವಾಗಿದೆ ಹಾಗೂ ನಿರುದ್ಯೋಗ ಸಮಸ್ಯೆಯೂ ಶೇಕಡಾ 2% ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿದರು. ಸಂಶೋಧನಾ ವಿದ್ಯಾರ್ಥಿಗಳು ಸಹ ಈ ಯೋಜನೆಗಳಿಂದ ಅನುಕೂಲವಾಗುತ್ತಿದೆ ಎಂದು ಅಭಿಪ್ರಾಯ ತಿಳಿಸುವ ಮೂಲಕ ಮುಕ್ತವಾಗಿ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಹೆಚ್.ಡಿ.ಪ್ರಶಾಂತ್‌ರವರು ಸಿದ್ಧಪಡಿಸಿರುವ "ಶಕ್ತಿ" ಯೋಜನೆಯ "butterfly Effect" ಎಂಬ ಸಂಶೋಧನಾ ಪ್ರಬಂಧದ ಸಾರಾಂಶ ಪ್ರತಿಯನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್‌ಖಾನ್ ರವರಿಗೆ ಸಲ್ಲಿಸಿದರು.

ಈ ವೇಳೆ ಕುಲಪತಿಗಳಾದ ಪ್ರೊ.ಡಿ.ವಿ. ಪರಮಶಿವಮೂರ್ತಿ, ಕುಲಸಚಿವರಾದ ವಿನಯ್ ಪೂಣಚ್ಚ ತಂಬಂಡ, ಅಭಿವೃದ್ಧಿ ಅಧ್ಯನದ ಮುಖ್ಯಸ್ಥರಾದ ಡಾ.ಗೀತಮ್ಮ.ಕೆ. ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಕೆ.ಶಿವಮೂರ್ತಿ ಉಪಸ್ಥಿತರಿದ್ದರು.

# ಬಳ್ಳಾರಿ ಮಹಾನಗರ ಪಾಲಿಕೆ: ಸ್ವ–ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ
ಕೇಂದ್ರ ಪುರಸ್ಕೃತ ಯೋಜನೆಯಾದ ಅಮೃತ್ 2.0 ಅಭಿಯಾನದ ಅಮೃತ್ ಮಿತ್ರ ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯಡಿ ಕಾರ್ಯಕ್ರಮದಡಿ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ನೀರಿನ ಬಳಕೆಯ ಶುಲ್ಕದ ಹಿಂದಿನ ಬಾಕಿ ಮೊತ್ತ ಮತ್ತು ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ಮೊತ್ತವನ್ನು ಸ್ವಸಹಾಯ ಸಂಘಗಳಿಂದ ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಸ್ವಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಸ್ವಸಹಾಯ ಸಂಘದ ಸದಸ್ಯರು ನಿಗಧಿತ ನಮೂನೆಯ ಅರ್ಜಿ ಪಡೆದು ಭರ್ತಿ ಮಾಡಿ ಫೆ.05 ರೊಳಗಾಗಿ ಅರ್ಜಿಯನ್ನು ಮಹನಾಗರ ಪಾಲಿಕೆ ಕಚೇರಿಯ ಡೇ–ನಲ್ಮ್ ಶಾಖೆಗೆ ಸಲ್ಲಿಸಬೇಕು.

ಅರ್ಹತೆ: ಸ್ವಸಹಾಯ ಸಂಘವು ಡೇ–ನಲ್ಮ್ ಅಭಿಯಾನದಡಿ ನೋಂದಾಯಿಸಿರಬೇಕು (ಎಂಐಎಸ್ ಕೋಡ್ ಹೊಂದಿರಬೇಕು) ಹಾಗೂ ಪಂಚಸೂತ್ರಗಳನ್ನು ಅನುಸರಿಸುತ್ತಿರಬೇಕು. ಆಸಕ್ತ ಸ್ವಸಹಾಯ ಸಂಘದ ಸದಸ್ಯರು ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣ ಹಾಗೂ ಎಲೆಕ್ಟ್ರಾನಿಕ್ ಪರಿಕರಗಳನ್ನು ಬಳಸುವ ಸಾಮರ್ಥ್ಯ ಹೊಂದಿರಬೇಕು. ಸ್ವಸಹಾಯ ಸಂಘದ ಹೆಸರಿನಲ್ಲಿ ಸಕ್ರಿಯ ಬ್ಯಾಂಕ್ ಖಾತೆ ಹೊಂದಿರಬೇಕು. ಸ್ವಸಹಾಯ ಗುಂಪು ರಚನೆಯಾಗಿ ಕನಿಷ್ಠ 3 ವರ್ಷ ಪೂರೈಸಿರಬೇಕು. ಬ್ಯಾಂಕಿನ ಮೂಲಕ ಅಥವಾ ಆಂತರಿಕ ಸಾಲ ಪಡೆದು ನಿಯಮಿತವಾಗಿ ಸಾಲ ಮರು ಪಾವತಿ ಮಾಡಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಗಡಿಗಿ ಚೆನ್ನಪ್ಪ ವೃತ್ತದ ಬಳಿಯ ಮಹಾನಗರ ಪಾಲಿಕೆ ಕಚೇರಿಗೆ ಸಂಪರ್ಕಿಸಬಹುದು ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ಬಸ್ ಪಾಸ್ : ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ
ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ವೃತ್ತಿ ಸಂಬಂಧಿತ ಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಯೋಜನೆಗೆ ಅರ್ಹ ಪತ್ರಕರ್ತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮುಖ್ಯಮಂತ್ರಿಗಳು 2024–25 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆ ಘೋಷಿಸಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು. ನೇಮಕಾತಿ ಆದೇಶ/ವೇತನ ಪತ್ರ/ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದಾದರೂ ದಾಖಲೆಗಳನ್ನು ಸೇವಾನುಭವಕ್ಕಾಗಿ ಒದಗಿಸಬೇಕು.

ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಗೆ ಉಚಿತವಾಗಿ ಸಂಚರಿಸಬಹುದು.ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲ್ಲೂಕಿಗೆ ಸಂಪಾದಕರು ಸೂಚಿಸುವ ಒಬ್ಬರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್ ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ.

ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಪ್ರತಿ ತಾಲ್ಲೂಕಿಗೆ ಓರ್ವ ಕ್ಯಾಮರಾಮ್ಯಾನ್ ಹಾಗೂ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದಾಗಿದೆ. ದಿನಪತ್ರಿಕೆಗಳು ಹಾಗೂ ಉಪಗ್ರಹ ಸುದ್ದಿ ವಾಹಿನಿಗಳ ಸಂಪಾದಕರು ನೀಡುವ ನೇಮಕಾತಿ ಪತ್ರ ಹಾಗೂ ಶಿಫಾರಸ್ಸು ಆಧರಿಸಿ ಅರ್ಹ ಪತ್ರಕರಿಗೆ ಬಸ್ ಪಾಸ್‌ಗಳನ್ನು ನೀಡಲಾಗುವುದು.

ಆಸಕ್ತ ಹಾಗೂ ಅರ್ಹ ಪತ್ರಕರ್ತರು ತಮ್ಮ ಸಮೀಪದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬೆಂಗಳೂರು ಒನ್ ಕೇಂದ್ರಗಳಿಗೆ ತೆರಳಿ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಬಹುದು. ಅಪ್‌ಲೋಡ್ ಮಾಡಿದ ದಾಖಲೆಗಳು ಹಾಗೂ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸ್ವಯಂ ದೃಢೀಕರಿಸಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com